ಸಂಪುಟ 01 । ಸಂಚಿಕೆ 37 । ಗುರುವಾರ 18 ಡಿಸೆಂಬರ್ 2025 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ವಲಸಿಗರ ದಿನ (International Migrants Day)**

ಡಿಸೆಂಬರ್ 18 ಅನ್ನು ವಿಶ್ವಸಂಸ್ಥೆಯು (United Nations) 'ಅಂತರರಾಷ್ಟ್ರೀಯ ವಲಸಿಗರ ದಿನ' ಎಂದು ಘೋಷಿಸಿದೆ.ಡಿಸೆಂಬರ್ 18, 1990 ರಂದು, ವಿಶ್ವಸಂಸ್ಥೆಯು 'ಎಲ್ಲಾ ವಲಸಿಗ ಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರ ಹಕ್ಕುಗಳ ರಕ್ಷಣೆಗಾಗಿ ಅಂತರರಾಷ್ಟ್ರೀಯ ಸಮಾವೇಶ'ವನ್ನು ಅಂಗೀಕರಿಸಿತು ಪ್ರಪಂಚದಾದ್ಯಂತ ವಲಸಿಗರು ನೀಡುವ ಕೊಡುಗೆಗಳನ್ನು ಗುರುತಿಸಲು ಮತ್ತು ಅವರ ಹಕ್ಕುಗಳನ್ನು ರಕ್ಷಿಸುವಲ್ಲಿ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**2. ಅಂತರರಾಷ್ಟ್ರೀಯ ಅರಬ್ಬಿ ಭಾಷಾ ದಿನ (World Arabic Language Day)**

ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾದ ಯುನೆಸ್ಕೋ (UNESCO) ಇದನ್ನು ಆಚರಿಸುತ್ತದೆ. ಅರಬ್ಬಿ ಭಾಷೆಯ ಶ್ರೀಮಂತ ಇತಿಹಾಸ, ಸಂಸ್ಕೃತಿ ಮತ್ತು ಜಾಗತಿ-ಕ ಕೊಡುಗೆಗಳನ್ನು ಆಚರಿಸುವುದು ಈ ದಿನದ ಉದ್ದೇಶವಾಗಿದೆ. 1973 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅರಬ್ಬಿ ಭಾಷೆಯನ್ನು ತನ್ನ ಆರನೇ ಅಧಿಕೃತ ಭಾಷೆಯಾಗಿ ಅಂಗೀಕರಿಸಿದ ದಿನವನ್ನು ಇದು ಸ್ಮರಿಸುತ್ತದೆ.

**3. ಭಾರತದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ದಿನ (Minorities Rights Day in India)**

ಭಾರತದಲ್ಲಿ ಪ್ರತಿ ವರ್ಷ ಡಿಸೆಂಬರ್ 18 ಅನ್ನು ಅಲ್ಪಸಂಖ್ಯಾತರ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನವನ್ನು 1992 ರಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ (National Commission for Minorities) ಆಯೋಜಿಸುತ್ತದೆ. ಭಾರತದ ಸಂವಿಧಾನವು ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು, ಅಲ್ಪಸಂಖ್ಯಾತ ಸಮುದಾಯಗಳ ರಕ್ಷಣೆ ಮತ್ತು ಕಲ್ಯಾಣವನ್ನು ಉತ್ತೇಜಿಸುವುದು ಇದರ ಮುಖ್ಯ ಗು-ರಿಯಾಗಿದೆ.

## ಸುಭಾಷಿತ

ತೀವ್ರ ಸಂಕಷ್ಟಗಳು ಒಬ್ಬ ಸಾಮಾನ್ಯ
ಮನುಷ್ಯನನ್ನು ಅಸಾಮಾನ್ಯ ಗುರಿ ಮುಟ್ಟಲು
ಸನ್ನದ್ಧಗೊಳಿಸಬಲ್ಲವು.

**ಅರುಣಿಮಾ ಸಿನ್ಹಾ**

# ಶಿಕ್ಷಕರ ಹುದ್ದೆ ಆಕಾಂಕ್ಷಿಗಳಿಗೆ ಸಿಹಿ ಸುದ್ದಿ: 21,381 ಹುದ್ದೆಗಳ ಭರ್ತಿಗೆ ಸಿದ್ದರಾಮಯ್ಯ ಗ್ರೀನ್ ಸಿಗ್ನಲ್

**ಬೆಳಗಾವಿ: ಕಲ್ಯಾಣ ಕರ್ನಾಟಕ ಜಿಲ್ಲೆಗಳ ಶೈಕ್ಷಣಿಕ ಗುಣಮಟ್ಟ ಸುಧಾರಣೆ ಕುರಿತಾಗಿ ತಜ್ಞರ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು. ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ 17,274 ಹುದ್ದೆಗಳು (ಒಟ್ಟು ಹುದ್ದೆಗಳ 38.2%) ಮತ್ತು ಪ್ರೌಢಶಾಲಾ ಶಿಕ್ಷಕರ 4,107 ಹುದ್ದೆಗಳ (34.8%) ಭರ್ತಿಗೆ ಶಿಫಾರಸ್ಸು ಮಾಡಲಾಗುವುದು ಎಂದರು.**

ಕಲ್ಯಾಣ ಕರ್ನಾಟಕ ಪ್ರದೇಶವು ತನ್ನ ವ್ಯಾಪ್ತಿಯಲ್ಲಿರುವ ಒಟ್ಟು ಶಾಲೆಗಳಲ್ಲಿ, ಸರ್ಕಾರಿ ಶಾಲೆಗಳ ಪಾಲು (57.35%) ಹೊಂದಿದ್ದು, ನಂತರದ ಸ್ಥಾನದಲ್ಲಿ ಖಾಸಗಿ ಶಾಲೆಗಳು (33.42%) ಇವೆ. ಮುಂದಿನ ತರಗತಿಗಳಿಗೆ ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಪ್ರಮಾಣ 7ನೇ ತರಗತಿ ಬಳಿಕ ನಿರಂತರವಾಗಿ ಕಡಿಮೆಯಾಗುತ್ತಿದೆ. 9 ರಿಂದ 10ನೇ ತರಗತಿಗೆ ತೇರ್ಗಡೆ ಶೇ.12ರಷ್ಟು ವಿದ್ಯಾರ್ಥಿ ಗಳಿಗೆ ಸಾಧ್ಯವಾಗುತ್ತಿಲ್ಲ. ಈ ಪ್ರದೇಶದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ 17,274 ಹುದ್ದೆಗಳು (ಒಟ್ಟು ಹುದ್ದೆಗಳ 38.2%) ಮತ್ತು



ಪ್ರೌಢಶಾಲಾ ಶಿಕ್ಷಕರ 4,107 ಹುದ್ದೆಗಳು (34.8%) ಖಾಲಿ ಇರುತ್ತವೆ. ಇದರಿಂದ ಪ್ರಾಥಮಿಕ ಹಂತದಿಂದಲ್ಲೇ ಶಿಕ್ಷಣದ ಗುಣಮಟ್ಟಕ್ಕೆ ಹಾನಿಯಾಗುತ್ತಿದೆ.

ಈ ಪ್ರದೇಶದ ಮೊದಲ ಹಂತದ ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಒಟ್ಟಾರೆ ಉತ್ತೀರ್ಣ ಪ್ರಮಾಣವು 53.40 ಶೇಕಡಾ ಆಗಿದ್ದು, ರಾಜ್ಯದ ಸರಾಸರಿ 66.14 ಶೇಕಡಾ ಆಗಿದೆ. ಇದು ಕಲಬುರಗಿ ಜಿಲ್ಲೆಯಲ್ಲಿ ಅತಿ ಕಡಿಮೆ – 42.43 ಶೇಕಡಾ ಆಗಿದೆ. ರಾಜ್ಯ ಮಟ್ಟದಲ್ಲಿ ಮೂರು ಪರೀಕ್ಷೆಗಳ ಸರಾಸರಿ ಫಲಿತಾಂಶ 79.97 ಶೇಕಡಾ ಆಗಿದ್ದು, ವಿಜಯನಗರ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳು ರಾಜ್ಯ ಸರಾಸರಿಗಿಂತ ಕಡಿಮೆ ಫಲಿತಾಂಶ ದಾಖಲಿಸಿವೆ.

ಕಡಿಮೆ ಸಾಧನೆಗೆ ಕಾರಣಗಳು: ವಿಷಯ ಶಿಕ್ಷಕರನ್ನೂ ಒಳ ಗೊಂಡಂತೆ ಶಿಕ್ಷಕರ ಕೊರತೆ ಇರುವುದು, ಬೋಧನಾ ವಿಧಾನಗಳಲ್ಲಿ ಕಡಿಮೆ ಮಟ್ಟದ ಸಾಮರ್ಥ್ಯ ವೃದ್ಧಿ, ಸೂಕ್ತ ತರಬೇತಿಯಿಲ್ಲದ ಅತಿಥಿ ಶಿಕ್ಷಕರೇ ಹೆಚ್ಚಾಗಿರುವುದು, ಪರಿಣ-ತ ಅಧ್ಯಾಪಕರ ಕೊರತೆಯಿಂದಾಗಿ ಡಯಟ್ ಸಂಸ್ಥೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆಯ ಕೊರತೆ, ಬಿಆರ್ಸಿ ಮತ್ತು ಸಿಆರ್ಸಿ ಗಳಿಂದ ಸಮರ್ಪಕ ಗುಣಮಟ್ಟದ ಶೈಕ್ಷಣಿಕ ಮಾರ್ಗದರ್ಶನದ ಕೊರತೆ, ಹಾಗೂ ಶಾಲಾ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮತ್ತು ಪರಿಶೀಲನೆಯಲ್ಲಿ ದುರ್ಬಲತೆ ಇರುವುದು ಫಲಿತಾಂಶ ಕಳಪೆಯಾಗಲು ಕಾರಣವಾಗಿವೆ ಎಂದು ಸಮಿತಿ ತಿಳಿಸಿದೆ.

ಸಮಿತಿಯ ಪ್ರಮುಖ ಶಿಫಾರಸ್ಸುಗಳು: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ತರಬೇತಿ ಪಡೆದ ಶಿಕ್ಷಕರ ಲಭ್ಯತೆ ಖಚಿತಪಡಿಸಲು ವರ್ಗಾವಣೆ ನೀತಿಯ ಪರಿಶೀಲನೆ ನಡೆಸುವ ಅಗತ್ಯವಿದೆ. ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆ ಕಾರ್ಯಕ್ರಮದ ಪರಿಣಾಮಕಾರಿ ಮತ್ತು ಫಲಿತಾಂಶಾಧಾ-ರಿತ ಅನುಷ್ಠಾನಕ್ಕೆ ತಂತ್ರ ರೂಪಿಸುವುದು. ಮಾಧ್ಯಮಿಕ ಶಿಕ್ಷಣಕ್ಕೆ ಪ್ರವೇಶ ಸುಧಾರಿಸಲು ಸಾಧ್ಯವಿರುವ ಮತ್ತು ಕಾರ್ಯನಿರ್ವಹಣೆಯಲ್ಲಿರುವ ಕಡೆಗಳಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳಾಗಿ ಮೇಲ್ದರ್ಜೆ ಗೇರಿಸುವುದು.


## ಎಸ್.ಐ.ಓ ಕರ್ನಾಟಕ ವತಿಯಿಂದ ಕಲಿಕೆಯೇ ಕಲ್ಯಾಣ ಪೋಸ್ಟರ್ ಬಿಡುಗಡೆ–ಡಾ. ಸಾದ್ ಬೆಲ್ಗಾಮಿ (ರಾಜ್ಯಾಧ್ಯಕ್ಷರು, JIH ಕರ್ನಾಟಕ)



❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: SIO ಕರ್ನಾಟಕವು ಕಳೆದ 42 ವರ್ಷದಿಂದ ಸಮಾಜದ ಪುನರ್ ನಿರ್ಮಾಣ-ಕ್ಕಾಗಿ ವಿದ್ಯಾರ್ಥಿ ಯುವಕರನ್ನು ಒಳ್ಳೆಯ ಮಾರ್ಗದರ್ಶನ ನೀಡುತ್ತಾ ಬಂದಿದೆ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳಿಗೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಶೈಕ್ಷಣಿಕ ವಾತಾವರಣಕ್ಕೆ ಪ್ರೋತ್ಸಾಹ ನೀಡುತ್ತಿದೆ ಆ ಕಲ್ಪನೆಯಲ್ಲಿ CERA ಜೊತೆಗಿನ ಸಹಯೋಗದಲ್ಲಿ ಕಲಿಕೆಯೇ ಕಲ್ಯಾಣ ಅಭಿಯಾನವನ್ನು ಡಾ. ಸಾದ್ ಬೆಲ್ಗಾಮಿ (ರಾಜ್ಯಾಧ್ಯಕ್ಷರು, JIH ಕರ್ನಾಟಕ) ಅವರ ಸಾನ್ನಿಧ್ಯದಲ್ಲಿ ರಾಜ್ಯ ಕಚೇರಿ ಜಯನಗರ ಬೆಂಗಳೂರಿನಲ್ಲಿ ಬಿಡುಗಡೆಗೊಳಿಸಲಾಯಿತು.**

ಈ ಸಂದರ್ಭದಲ್ಲಿ SIO ರಾಜ್ಯಾಧ್ಯಕ್ಷರಾದ ಆದಿ ಅಲ್ ಹಸನ್ ಹಾಗೂ




ರಾಜ್ಯ ಕಾರ್ಯದರ್ಶಿಗಳಾದ ಜೋಹರ್ ಕಾಶಿಫ್, ಹಯ್ಯಾನ್, ಸುಫಿಯನ್ ಜೈನ್, ಆಸಿಫ್, ಅಬೂಬಕರ್ ಮತ್ತು ಅಶ್ಫಾಕ್ ಉಸ್ತಾದ್ ಅವರು ಪೋಸ್ಟರ್ ಬಿಡುಗಡೆ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಅಭಿಯಾನವು ಡಿಸೆಂಬರ್ 15, 2025 ರಿಂದ ಫೆಬ್ರವರಿ 15, 2026 ರವರೆಗೆ ನಡೆಯಲಿದೆ ಈ ಅಭಿಯಾನದ ಮುಖ್ಯಾಂಶ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶೈಕ್ಷಣಿಕ ಉನ್ನತಿಗಾಗಿ ಬೀದಿ ಸಭೆಗಳು, ಶಾಲೆಗಳ ಭೇಟಿ,ಮಸೀದಿ ಸಭೆಗಳು,ವೃತ್ತಿ ಮಾರ್ಗದರ್ಶನ ತರಗತಿಗಳು,ಉದ್ದೇಶಿತ ಶೈಕ್ಷಣಿಕ ಬೆಂಬಲ,ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಎದುರಿಸುವುದು ಹೇಗೆ–ತರಗತಿಗಳು,ಜನ ಸಂಪರ್ಕ ಸಭೆಗಳು ದುಂಡು ಮೇಜಿನ ಸಭೆ / ವಿಚಾರ ಸಂಕಿರಣ ಹೀಗೆ ಕಾರ್ಯಕ್ರಮಗಳು ಸಿ.ಈ ಆರ್.ಎ ಇವರ ಸಹಯೋಗದೊಂದಿಗೆ ನಡೆಯಲಿವೆ ಕಲ್ಯಾಣ ಕರ್ನಾಟಕದ ಸರ್ವರು ಭಾಗಿಯಾಗಿ ಯಶಸ್ವಿಗೊಳಿಸಬೇಕೆಂದು ಎಸ್.ಐ. ಓ ವಿದ್ಯಾರ್ಥಿ ಸಂಘಟನೆಯ ರಾಜ್ಯ ಅಧ್ಯಕ್ಷ ಆದಿ ಅಲ್ ಹಸನ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

## ಮಸ್ಕಿ ತಾಲೂಕು ಕಾರ್ಯ ನಿರತ ಪತ್ರಕರ್ತರ ಸಂಘಕ್ಕೆ ಅವಿರೋಧ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್



ಮಸ್ಕಿ: ಡಿ 15 ರಂದು ತಾಲ್ಲೂಕು ಘಟಕದ ಪದಾಧಿಕಾ-ರಿಗಳ ಆಯ್ಕೆ ಮಸ್ಕಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾಗಿರುವ ಹಿರಿಯ ಪತ್ರಕರ್ತರಾದ ಅಬ್ದುಲ್ ಅಜಿಜ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ವಿಠಲ್ ಕೇಳುತ ಉಪಾಧ್ಯಕ್ಷರಾಗಿ ಆಯ್ಕೆಯಾದ ಬದ್ರಿನಾಥ್ ಹಾಗೂ ಖಜಾಂಚಿಯಾಗಿ ಅಮರೇಶ ಆಯ್ಕೆಯಾದರು.

## ಮಸ್ಕಿ ತಾಲೂಕು ಪತ್ರಕರ್ತ ಸಂಘದಿಂದ ಪುರಸಭೆ ಅಧ್ಯಕ್ಷ ಸುರೇಶ ಹರಸೂರಗೆ ಸನ್ಮಾನ ಪಟ್ಟಣದ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ :ಅಧ್ಯಕ್ಷ ಸುರೇಶ ಹರಸೂರು

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಪುರಸಭೆ ನೂತನ ಅಧ್ಯಕ್ಷ ಸುರೇಶ ಹರಸೂರ ಅವರಿಗೆ ಇಲ್ಲಿನ ಪತ್ರಕರ್ತರ ಸಂಘದ ಪದಾಧಿಕಾರಿಗಳು ಸನ್ಮಾನಿಸಿ ಅಭಿನಂದಿಸಿದರು. ಈ ವೇಳೆ ಪುರಸಭೆ ಅಧ್ಯಕ್ಷ ಸುರೇಶ ಹರಸೂರು ಅವರು ಮಾತನಾಡಿ, ಪತ್ರಕರ್ತರ ನೂರಾರು ಸಮಸ್ಯೆಗಳಿದ್ದರು.**

ಅದನ್ನು ಬದಿಗೊತ್ತಿ ಸುದ್ದಿಗಳ ಮೂಲಕ ಸಮಾಜದ ಅಂಕುಡೊಂಕು ತಿದ್ದುವ ಕೆಲಸ ಮಾಡುತ್ತಾರೆ. ನಿಮ್ಮ ಎನೇ ಸಮಸ್ಯೆ ಇದ್ದರೂ ನಮ್ಮ ಗಮನಕ್ಕೆ ತನ್ನಿ ಸಾಧ್ಯವಾದಷ್ಟು ಪರಿಹರಿಸುವ ಕೆಲಸ ಮಾಡುತ್ತೇವೆ ಎಂದು




ಹೇಳಿದರು. ಈ ಸಂದರ್ಭದಲ್ಲಿ ಪತ್ರಕರ್ತರ ಸಂಘದ ತಾಲೂಕು ಘಟಕದ ಅಧ್ಯಕ್ಷ ಅಬ್ದುಲ್ ಅಜೀಜ್, ಜಿಲ್ಲಾ ಪ್ರತಿನಿಧಿ ಪ್ರಕಾಶ ಮಸ್ಕಿ, ಪ್ರಧಾನ ಕಾರ್ಯದರ್ಶಿ ವಿಠಲ ಕೆಳೂತ್, ಹಿರಿಯ ಪತ್ರಕರ್ತ ವೀರೇಶ ಸೌದ್ರಿ, ಇಂದರಪಾಷ ಚಿಂಚರಕಿ, ರವಿ ಗೌಡನಭಾವಿ, ಅಮರೇಶ ಸಾಲಿಮಠ, ಹನುಮೇಶ ನಾಯಕ, ಹನುಮೇಶ ಬಳಗಾನೂರು, ಭದ್ರಿನಾಥ, ಅಮರೇಶ ಪತ್ತಾರ, ದುರ್ಗೇಶ ಹಸಮಕಲ್ ಸೇರಿದಂತೆ ಇನ್ನಿತರಿದ್ದರು.

## ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪೋಲಿಯೋ ಬೂತ್‌ಗಳ ಮಾಹಿತಿ ಪಡೆಯಿರಿ: ಜುಬಿನ್ ಮೊಹೊಪಾತ್ರ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 17 (ಕರ್ನಾಟಕ ವಾರ್ತೆ): ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಐದು ವರ್ಷದ ಒಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ಹಾಕುವ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ನಗರದಾದ್ಯಂತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದು,**

ಪೋಲಿಯೋ ಬೂತ್ ಗಳ ಮಾಹಿತಿ ಪಡೆಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ತಮ್ಮ ಹತ್ತಿರದ ಬೂತ್ ವಿಳಾಸವನ್ನು ಪಡೆದು ಲಸಿಕೆ ಹಾಕಿಸಬೇಕೆಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಕೋರಿದ್ದಾರೆ. ನಗರದ ಯಾವುದೇ ಮಗು ಲಸಿಕೆಯಿಂದ ವಂಚಿತರಾಗದಂತೆ ಸಾರ್ವಜನಿಕರು ಕೈಜೋಡಿಸಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಯನ್ನಾಗಿಸಲು ಡಿಸೆಂಬರ್ – 21ರಂದು ಎಲ್ಲಾ ಸರಕಾರಿ ಆಸ್ಪತ್ರೆ ಬಸ್ ನಿಲ್ದಾಣ, ರೈಲು ನಿಲ್ದಾಣ, ಅಂಗನವಾಡಿ ಮತ್ತು ಶಾಲೆಗಳಲ್ಲಿ ಬೂತ್ ತೆರೆಯಲಾಗಿದೆ. ಬೂತ್ ಗಳ ಮಾಹಿತಿಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸರ್ಕಾರಿ ನೌಕರರ ಕ್ರೀಡಾಕೂಟ ಪೂರ್ವಭಾವಿ ಸಭೆ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳು ಅಚ್ಚುಕಟ್ಟಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ ಶಿವಾನಂದ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 17 (ಕರ್ನಾಟಕ ವಾರ್ತೆ): ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಜನವರಿ 8 ಹಾಗೂ 9ರಂದು ನಡೆಯಲಿದ್ದು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಹೇಳಿದರು.**

ಡಿಸೆಂಬರ್ 17ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇ-ರಿಯ ಸಭಾಂಗಣದಲ್ಲಿ ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರಕಾರಿ ನೌಕರರ ಕ್ರೀಡಾಕೂಟದಲ್ಲಿ ಪುರುಷರ 45 ವರ್ಷ ಒಳಗಿನ ಮತ್ತು 45 ವರ್ಷ ಮೇಲ್ಪಟ್ಟ ವಿಭಾಗ ಮಾಡಲಾಗಿದೆ. ಅದೇ ರೀತಿ ಮಹಿಳೆಯರಿಗೆ 40 ವರ್ಷ ಒಳಗಿನ ಮತ್ತು 40 ವರ್ಷ ಮೇಲ್ಪಟ್ಟವ-ರಿಗಾಗಿ ಸ್ಪರ್ಧೆಗಳು ನಡೆಯಲಿವೆ ಎಂದರು.




ನೌಕರರು ಪಾಲ್ಗೊಳ್ಳಲು ಆನ್‌ಲೈನ್‌ನಲ್ಲಿ ಕಡ್ಡಾಯವಾಗಿ ನೊಂದಣಿ ಮಾಡಿಕೊಳ್ಳಲು ಅಗತ್ಯ ವ್ಯವಸ್ಥೆ ಕೈಗೊಳ್ಳಬೇಕು. ಕೆಜಿಐಡಿ ಸಂಖ್ಯೆಯೊಂದಿಗೆ ಆಯಾ ಕಚೇರಿ ಮುಖ್ಯಸ್ಥ-ರಿಂದ ದೃಢೀಕರಣ ಪತ್ರ ಹಾಜರುಪಡಿಸಬೇಕು.

ಕ್ರೀಡಾಂಗಣದಲ್ಲಿ ಕುಡಿಯುವ ನೀರು, ನೆರಳು, ತುರ್ತು ವೈದ್ಯಕೀಯ ನೆರವು, ಊಟೋಪಹಾರ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆ ಕೈಗೊಳ್ಳಲು ಪ್ರತ್ಯೇಕ ಉಪಸಮಿತಿ ರಚಿಸಲಾಗುತ್ತದೆ ಎಂದರು. ವಾರ್ಷಿಕ ಕ್ರೀಡಾಕೂಟ ಆಯೋಜನೆ ಕು-ರಿತಂತೆ ಉಪ ಸಮಿತಿಯವರು, ಪದಾಧಿಕಾ-ರಿಗಳು ತಮಗೆ ವಹಿಸುವ ಜವಾಬ್ದಾ-ರಿಗಳನ್ನು ಸಮರ್ಪಕವಾಗಿ ನಿಭಾಯಿಸಿ ಸಹಕಾರ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ವರ್ಷವಿಡೀ ಕರ್ತವ್ಯ ನಿರ್ವಹಣೆ, ಸಾರ್ವಜನಿಕ ಕೆಲಸ, ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ನಿರತರಾದ ನೌಕರರಿಗೆ ವರ್ಷದ 2 ದಿನ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಮೂಲಕ ಉತ್ಸಾಹ ತುಂಬಿ ಕರ್ತವ್ಯ ನಿರ್ವಹಣೆಗೆ ಮತ್ತಷ್ಟು ಪ್ರೇರಣೆ ನೀಡೋಣ ಎಂದರು.

ಈ ವೇಳೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿರೇಶ ನಾಯಕ ಅವರು ಮಾತನಾಡಿ, ಕ್ರೀಡಾಕೂಟದ ಉದ್ಘಾಟನಾ ಸಮಾರಂಭ ಜನವರಿ 8 ರಂದು ಬೆಳಗ್ಗೆ 9ಗಂಟೆಗೆ ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದರು. ಈ ವೇಳೆ ಸರ್ಕಾರಿ ನೌಕರರ ಜಿಲ್ಲಾಧ್ಯಕ್ಷರಾದ ಕೃಷ್ಣ ಶಾಂವತಗೇರಾ ಅವರು ಮಾತನಾಡಿ, ನೌಕರರ ಕ್ರೀಡಾಕೂಟವನ್ನು ಅದ್ದೂ-ರಿಯಾಗಿ ನಡೆಸಬೇಕು. ಅತಿ ಹೆಚ್ಚು ನೌಕರರು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಬಾರಿ ಸಂಭ್ರಮದಿಂದ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿ-ಕೆ ನಡೆಸಬೇಕು. ಕ್ರೀಡಾಕೂಟದ ವ್ಯವಸ್ಥೆಗೆ ಸಂಬಂಧಿಸಿದಂತೆ ಜವಾಬ್ದಾರಿಯನ್ನು ವಹಿಸಿಕೊಂಡ ಇಲಾಖೆಗಳು ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಬೇಕೆಂದರು. ಇದೇ ಸಂದರ್ಭದಲ್ಲಿ ರಾಯಚೂರು ತಹಶೀಲ್ದಾರ್ ಸುರೇಶ ವರ್ಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಸರ್ಕಾರಿ ನೌಕರರ ಸಂಘದ ಪದಧಿಕಾ-ರಿಗಳಾದ ಸಮತೋಷ, ರಾಜಶೇಖರ, ರಾಮು ಸೇರಿದಂತೆ ಇತರರು ಇದ್ದರು.

## ಸಾಹಿತ್ಯ ಸಿಂಚನ

ಅಲೆಮಾರಿಗಳು.!

ಈ ಜಗದ ಸಂತೆಯಲಿ
ಹುಡುಕುತ್ತ ಚಿಂತೆಯಲಿ
ನಿರಂತರ ತಿರುಗುತಿರುವ
ಅಲೆಮಾರಿಗಳೆ ನಾವೆಲ್ಲರು.!

ಸಂಪತ್ತು ಧನ ಕನಕಗಳ
ಸಿರಿಯನರಸುತ್ತ ಹಲವರು.
ಒಲವು ಚೆಲುವು ಗೆಲುವಿನ
ಚಂದ್ರಿಕೆಯರಸುತ್ತ ಹಲವರು.!

ವಿಜ್ಞಾನ ತಂತ್ರಜ್ಞಾನಗಳ
ಬೆಳಕನರಸುತ್ತ ಹಲವರು
ಜ್ಞಾನ ಅರಿವು ಅದೃಶ್ಯಗಳ
ರಶ್ಮಿಯರಸುತ್ತ ಹಲವರು.!

ಆಧ್ಯಾತ್ಮ ಅಂತರಾತ್ಮಗಳ
ಜ್ಯೋತಿಯರಸುತ್ತ ಕೆಲವರು
ಅಲೌಕಿಕ ಮುಕ್ತಿ ಶಾಂತಿಯ
ಕಿರಣಗಳರಸುತ್ತ ಕೆಲವರು.!

ರಾಗ ವಿರಾಗ ರಿಂಗಣಗಳಲಿ
ನೀತಿ ಭೀತಿ ತಲ್ಲಣಗಳಲಿ
ಅರಸುತ ಭ್ರಮೆಭ್ರಾಂತಿಗಳಲಿ
ನಡೆದಿಹ ಬರಿಗೈ ಫಕೀರರು.!

ತಿರುಗುವ ಧರೆಯೊಂದಿಗೆ
ಅನವರತ ಹೊರೆಯೊಂದಿಗೆ
ಓಡುತಿಹ ಕಾಲದೊಂದಿಗೆ
ಅಭೇದ್ಯ ಜಾಲದೊಂದಿಗೆ
ನಡೆದಿದಿದೆ ನಿರಂತರ ನಡಿಗೆ.!

ಅಲೆಯುತ್ತಲೇ ಇದ್ದೇವೆ..
ಹುಟ್ಟಿನಿಂದ ಸಾವಿನವರೆಗೆ.!
ನಿತ್ಯ ನಡೆಯುತ್ತಲೇ ಇದ್ದೇವೆ
ಅಂತ್ಯವಿಲ್ಲದ ಹಾದಿಯಲಿ.!
ಸತ್ಯಮಿಥ್ಯೆಯ ಅನ್ವೇಷಣೆಯಲಿ.!

ಎ.ಎನ್.ರಮೇಶ್. ಗುಬ್ಬಿ.

# ಪೃಥ್ವಿ ಹೆಗಡೆಗೆ ಕರ್ನಾಟಕ ಸರ್ಕಾರದ "ಬಾಲಗೌರವ" ಪ್ರಶಸ್ತಿ ಪ್ರದಾನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಭರತನಾಟ್ಯ ಪ್ರವೀಣೆ, ನಾಟ್ಯ ಮಯೂರಿ ಕುಮಾರಿ ಪೃಥ್ವಿ ಎಂ.ಹೆಗಡೆ ಇವರಿಗೆ ಕರ್ನಾಟಕ ಸರ್ಕಾರ ಬಾಲ ವಿಕಾಸ ಅಕಾಡೆಮಿ ಧಾರವಾಡ ನೀಡುವ "ಬಾಲಗೌರವ" ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.**

ಡಿಸೆಂಬರ್ 16 ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹಾಗೂ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಸೇರಿ ಹಲವು ಗಣ್ಯರ ಸಮ್ಮುಖದಲ್ಲಿ 10ಸಾವಿರ ನಗದು, ಸ್ಮರಣಿಕೆ, ಬಾಲಗೌರವ ಪ್ರಶಸ್ತಿ ನೀಡಿ ನಾಟ್ಯಮಯೂರಿ ಪೃಥ್ವಿ ಎಮ್ ಹೆಗಡೆ ಅವರಿಗೆ ಗೌರವಿಸಲಾಗಿದೆ. 10 ವರ್ಷದಿಂದ ತಾಳಿಕೋಟಿ ಪಟ್ಟಣದ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯಲ್ಲಿ



ವಿನೋದಕುಮಾರ ಚಿಕ್ಕಮಠ ಇವರ ಹತ್ತಿರ ಭರತನಾಟ್ಯ ಹಾಗೂ ಜಾನಪದ ತರಬೇತಿ ಪಡೆದುಕೊಂಡು ತಮ್ಮ ನೃತ್ಯದ ಮೂಲಕ ಜನರ ಮನಸ್ಸು ಸೆಳೆದಿರುವ ವಿದ್ಯಾರ್ಥಿನಿ ನಾಟ್ಯಮಯೂರಿ ಪೃಥ್ವಿ ಎಮ್ ಹೆಗಡೆ ಇವರು ಈಗಾಗಲೇ ರಾಷ್ಟ್ರೀಯ ಪ್ರಶಸ್ತಿ ಯನ್ನು ಪಡೆದುಕೊಂಡಿದ್ದಾರೆ.ಈ ನೃತ್ಯ ಕಲಾವಿದೆ ತಾಳಿಕೋಟಿ ನಿವಾಸಿ ಆಗಿದ್ದು ಕರ್ನಾಟಕ. ಕೇರಳ. ಉತ್ತರಪ್ರದೇಶ. ಹಾಗೂ ಮಾಹಾರಾಷ್ಟ್ರ. ಆಂಧ್ರಪ್ರದೇಶ.ದಲ್ಲಿ ತಮ್ಮ ನೃತ್ಯ ಪ್ರದರ್ಶನ ನೀಡಿರುತ್ತಾರೆ ಮತ್ತು ಚಂದನ ವಾಹಿನಿಯಲ್ಲಿ ಶ್ರೀ ಬಸವ ವಾಹಿನಿಯಲ್ಲಿ 231 ಭರತನಾಟ್ಯ ಹಾಗೂ ಜಾನಪದ ನೃತ್ಯ ಪ್ರದರ್ಶನ ನೀಡಿ ಹಾಗೂ ಹಲವಾರು ಉತ್ಸವದಲ್ಲಿ ಭಾಗವಹಿಸಿ ರಾಜ್ಯ ಪ್ರಶಸ್ತಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

ನಾಟ್ಯಮಯೂರಿ ಕುಮಾರಿ ಪೃಥ್ವಿ ಎಮ್. ಹೆಗಡೆ ಇವರು1000 ಕ್ಕೂಹೆಚ್ಚು ನೃತ್ಯ ಪ್ರದರ್ಶನ ನೀಡಿ ರಾಜ್ಯ ಹಾಗೂ ಹೊರ ರಾಜ್ಯಗಳ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



ಹಲವಾರು ರಾಜ್ಯ ಹಾಗೂ ರಾಷ್ಟ್ರೀಯ ಪ್ರಶಸ್ತಿಯನ್ನು ತಾಳಿಕೋಟಿಗೆ ತಂದು ಕೊಟ್ಟಿರುವ ವಿದ್ಯಾರ್ಥಿನಿಗೆ ಈಗ ಕರ್ನಾಟಕ ಸರ್ಕಾರ ಬಾಲವಿಕಾಸ ಅಕಾಡೆಮಿ ಧಾರವಾಡ ನಿಡುವ ಬಾಲಗೌರವ ಪ್ರಶಸ್ತಿ ಲಭಿಸಿದೆ. ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆ (ರಿ) ತಾಳಿಕೋಟಿ ಅಧ್ಯಕ್ಷ ವಿನೋದಕುಮಾರ ಚಿಕ್ಕಮಠ ಹಾಗೂ ಎಲ್ಲಾ ಪದಾಧಿಕಾರಿಗಳು, ಸಮಸ್ತ ತಾಳಿಕೋಟಿ ಜನತೆ ಈ ವಿದ್ಯಾರ್ಥಿನಿಯ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ.

# ವಿದ್ಯಾರ್ಥಿಗಳಿಗೆ ಯೋಗಾಸನ–ಪ್ರಾಣಾಯಾಮ ತರಬೇತಿ ನೀಡಿದ ಅನ್ನದಾನಯ್ಯ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ಮಾನ್ವಿ ನಗರದ ಉರ್ದು ಪ್ರೌಢಶಾಲೆಯಲ್ಲಿ ಧ್ಯಾನ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗಾಗಿ ಉಚಿತ ಯೋಗ?ಧ್ಯಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಶಿಬಿರವನ್ನು ಮಧ್ಯಾಹ್ನ 3:00 ರಿಂದ 4:30 ರವರೆಗೆ ಯೋಗ ಗುರು ಅನ್ನದಾನಯ್ಯ ಅವರು ನಡೆಸಿಕೊಟ್ಟರು.**

ಶಿಬಿರದ ಆರಂಭದಲ್ಲಿ ವಿದ್ಯಾರ್ಥಿಗಳಿಗೆ ಯೋಗಾಸನಗಳ ಅಭ್ಯಾಸ ಮಾಡಿಸಲಾಯಿತು. ವೃಕ್ಷಾಸನ, ತ್ರಿಕೋಣಾಸನ, ಉತ್ಕಟಾಸನ, ಪಾದಸ್ತಾಸನ, ಜಾನುಶೀರಾಸನ, ಉಷ್ಟ್ರಾಸನ ಹಾಗೂ ವಜ್ರಾಸನಗಳನ್ನು ಕ್ರಮಬದ್ಧವಾಗಿ ಹೇಳಿಕೊಡಲಾಯಿತು. ನಂತರ ನಾಡಿ ಶುದ್ಧಿ



ಪ್ರಾಣಾಯಾಮ ಮತ್ತು ಬ್ರಾಹ್ಮರಿ ಪ್ರಾಣಾಯಾಮದ ಕುರಿತು ತರಬೇತಿ ನೀಡಿ, ಕೊನೆಯಲ್ಲಿ ಧ್ಯಾನ ವಿಧಾನವನ್ನು ತಿಳಿಸಿಕೊಡಲಾಯಿತು. ಯೋಗ ಮತ್ತು ಧ್ಯಾನದ ಆರೋಗ್ಯಕರ ಪ್ರಯೋಜನಗಳ ಬಗ್ಗೆ ಸಹ ವಿವರಿಸಲಾಯಿತು. ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಮುಖ್ಯಗುರು ಅಶೋಕ್ ಕುಮಾರ್ ಚಿಂಚೋಳ್ಳಿ ಅವರು, ಇಂದಿನ ವೇಗದ ಜೀವನಶೈಲಿಯಲ್ಲಿ ಮನಸ್ಸಿನ ಒತ್ತಡವನ್ನು ಕಡಿಮೆ ಮಾಡಿ ಶಾಂತ ಜೀವನ ನಡೆಸಲು ಯೋಗ ಮತ್ತು ಧ್ಯಾನ ಅತ್ಯಂತ ಅಗತ್ಯವಾಗಿದೆ. ವಿದ್ಯಾರ್ಥಿಗಳು ನಿತ್ಯ ಜೀವನದಲ್ಲಿ ಯೋಗ–ಧ್ಯಾನವನ್ನು ಅಭ್ಯಾಸ ಮಾಡುವ ರೂಢಿ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಯೋಗ ಗುರು ಅನ್ನದಾನಯ್ಯ ಅವರನ್ನು ಶಾಲಾ ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಸಹ ಶಿಕ್ಷಕಿ ಅಹಮ್ಮದಿ ಬೇಗಮ್, ಅತಿಥಿ ಶಿಕ್ಷಕರಾದ ಆಯಿಷಾ ಬೇಗಮ್, ಇಮ್ರಾನ್ ಬೇಗಮ್, ಸಿದ್ದಪ್ಪ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕ ಘಟಕದಿಂದ ಅಗಲಿದ ಗಣ್ಯರಿಗೆ ಶ್ರಾದ್ಧಾಂಜಲಿ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕ ಘಟಕದ ಕಾರ್ಯಾಲಯದಲ್ಲಿ ಅ.ಖಿ.ಭಾ.ವೀ.ಲಿಂ. ಮಹಾಸಭಾದ ತಾಲೂಕ ಘಟಕದವತಿಯಿಂದ ಇತ್ತಿಚಿಗೆ ನಿಧನರಾದ ಅ.ಖಿ.ಭಾ.ವೀ.ಲಿಂ. ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಲಿಂ. ಡಾ. ಶಾಮನೂರ ಶಿವಶಂಕರಪ್ಪ ಹಾಗೂ ಮಾನ್ವಿ ತಾಲೂಕಿನ ಅಡವಿ ಅಮರೇಶ್ವರ ಮಠದ ಲಿಂ. ಶ್ರೀ ಶಾಂತಮಲ್ಲ ಮಹಾಸ್ವಾಮಿಗಳಿಗೆ.**


ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿ ಅ.ಖಿ.ಭಾ.ವೀ.ಲಿಂ.ಮಹಾಸಭಾದ ತಾಲೂಕ ಅಧ್ಯಕ್ಷರಾದ ಅರುಣ್ ಚಂದಾ ಮಾತನಾಡಿ ಅ.ಖಿ.ಭಾ.ವೀ.ಲಿಂ.ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಲಿಂ. ಡಾ. ಶಾಮನೂರ ಶಿವಶಂಕರಪ್ಪ ನವರು ರಾಜ್ಯದಲ್ಲಿ ವೀರಶೈವ ಲಿಂಗಾಯತ ಸಮುದಾಯವನ್ನು ಸಂಘಟಿಸಿ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದರೆ ಅವರನ್ನು ವೀರಶೈವ ಲಿಂಗಾಯತ ಸಮಾಜ ಕಳೆದುಕೊಂಡಂತಾಗಿದೆ ತಾಲೂಕಿನಲ್ಲಿನ ಅಡವಿ ಅಮರೇಶ್ವರ ಮಠದ ಲಿಂ. ಶ್ರೀ ಶಾಂತಮಲ್ಲ ಮಹಾಸ್ವಾಮಿಗಳು ಸಮಾಜ ಮುಖಿ ಕಾರ್ಯಗಳ ಮೂಲಕ ತಾಲೂಕಿನಲ್ಲಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ,ಸಾಹಿತ್ಯಿಕವಾಗಿ ಸಮಾಜಿಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ನುಡಿನಮನದಲ್ಲಿ ತಿಳಿಸಿದರು.

ಸಭೆಯಲ್ಲಿ ಬಣಜಿಗ ಸಮಾಜದ ತಾಲೂಕಾಧ್ಯಕ್ಷರಾದ ಮಲ್ಲಿಕಾರ್ಜುನಗೌಡ ಗಣೇಕಲ್, ತಾಲೂಕ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರ ಪಾಟೀಲ್ ,ಪದಾಧಿಕಾರಿಗಳಾದ ಶ್ರೀಧರ್ ಸ್ವಾಮಿ ಕೊಟ್ನೆಕಲ್, ವೀರನಗೌಡ ಸಂಗಾಪುರ, ಜಗದೀಶ ಓತೂರ, ರೇವಣಸಿದ್ದಯ್ಯ ಸ್ವಾಮಿ, ಪ್ರದೀಪ್ ಪಾಟೀಲ್, ಶರಣಪ್ಪ ಮಾಸ್ಟರ್ ಅ.ಖಿ.ಭಾ.ವೀ.ಲಿಂ.ಮಹಾಸಭಾದ ಪದಾಧಿಕಾ–ರಿಗಳಾದ ಶಿವಲಿಂಗಯ್ಯ ಸ್ವಾಮಿ, ರವಿಕುಮಾರ ಪಾಟೀಲ್ ಚಿಮ್ಲಾಪುರ,ಶರಣಬಸವ, ವಿಶ್ವನಾಥ ಪಾಟೀಲ, ಗುರುಗೌಡ ಕಣ್ಣೂರು,ತಿಪ್ಪಣ್ಣ ಹೊಸಮನಿ,ಶಂಕರಪ್ಪ ನಕ್ಕುಂದಿ,ಮಲ್ಲಭದ್ರಗೌಡ ನೀರಮಾನ್ವಿ, ಜನಾರ್ದನ ಸಾಹುಕಾರ,ದೇವೇಂದ್ರ ಹೂಗಾರ, ಶಿವಕುಮಾರ್ ಪಾಟೀಲ್,ಮಂಜುನಾಥ ಪಾಟೀಲ್, ಮಾಧ್ಯಮ ಸಮಿತಿ ಅಧ್ಯಕ್ಷರಾದ ರಾಜಶೇಖರ ಸ್ವಾಮಿ, ಶರಣಬಸವಹರವಿ, ಶಿವಕುಮಾರಗೌಡ ಹಳ್ಳಿಹೊಸೂರು,ಬಸವರಾಜ ಹರನಳ್ಳಿ ,ಬಸವಂತ ಶೆಟ್ಟಿ, ಶರಣಯ್ಯ ಸ್ವಾಮಿ, ಹೊಯ್ಸಳ ಸ್ವಾಮಿ, ನಾಗರಾಜ, ದರ್ಶನ ಪಾಟೀಲ ಸಂಗಾಪುರ ನಿರ್ಮಲಾ , ಕು.ಶ್ರುತಿ ಪಾಟೀಲ್ ಸೇರಿದಂತೆ ಸಮಾಜದ ಗಣ್ಯರು ಸದಸ್ಯರು ಇದ್ದರು.

## ದಿದ್ದಿಗಿಯಲ್ಲಿ ಹಿಟ್ಟಿನ ಗಿರಣಿಯಿಂದ ಸಾರ್ವಜನಿಕರಿಗೆ ತೊಂದರೆ, ತೆರವಿಗೆ ಆದೇಶ ಉಲ್ಲಂಘನೆ: ಡಿ.ಕೆ.ವೀರೇಶ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ರಾಮತ್ನಾಳ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ದಿದ್ದಿಗಿ ಗ್ರಾಮದಲ್ಲಿ ಪಕ್ಕದ ಮನೆಭದ್ರತೆ, ಪರವಾನಗಿ ಪಡೆಯದಿರುವ ಕಾರಣಕ್ಕೆ ಹಿಟ್ಟಿನ ಗಿರಣಿ ಮುಚ್ಚುವಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಆದೇಶ ಮಾಡಿದರೂ ಸಹ ಕ್ಯಾರೇ ಎನ್ನದ ಪಿಡಿಒ ಆದೇಶ ಪಾಲನೆಗೆ ಮುಂದಾಗುತ್ತಿಲ್ಲ. ಇದು ಹೀಗೆ ಮುಂದುವರೆದರೆ, ಸಂಘಟನೆಯಿಂದ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಕೋಡಿಹಳ್ಳಿ ಚಂದ್ರಶೇಖರ್ ಬಣದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ವಿದ್ಯಾರ್ಥಿ ಘಟಕದ ತಾಲೂಕು ಅಧ್ಯಕ್ಷ ವೀರೇಶ ದಿದ್ದಿಗಿ ಎಚ್ಚರಿಕೆ ನೀಡಿದರು.




ಬುಧವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 2019ರಲ್ಲಿ ಶಿವಗ್ಯಾನಪ್ಪ ತಂದೆ ಗ್ಯಾನಪ್ಪ ಕಡ್ಲಿಯವರು, ಹಿಟ್ಟಿನ ಗಿರಣಿಯನ್ನು ಯಾವುದೇ ಪರವಾನಗಿ ಪಡೆಯದೆ ಪ್ರಾರಂಭಿಸಿದ್ದಾರೆ. ಹಿಟ್ಟಿನ ಗಿರಣಿ ಸೌಂಡ್ ನ ರಭಸಕ್ಕೆ ಪಕ್ಕದ ಮನೆಯ ಗೋಡೆಗಳು ಬಿರುಕು ಬಿಟ್ಟಿವೆ. ಪಕ್ಕದಲ್ಲಿರುವ ಮನೆ ಮಹಾಂತೇಶ ಅವರದು, ಬೀಳುವ ಆತಂಕದಲ್ಲಿದ್ದಾರೆ. ಪ್ರತಿದಿನ ಪಕ್ಕದ ಮನೆಯ ನಿವಾಸಿಗಳು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಬದುಕುತ್ತಿದ್ದಾರೆ. ಹಾಗೂ ವಿಪರೀತ ಕರ್ಕಶವಾದ ಶಬ್ದಕ್ಕೆ ಗಿರಣಿ ಸುತ್ತಮುತ್ತಲಿನ ಮನೆಯಲ್ಲಿರುವ ವಿದ್ಯಾರ್ಥಿಗಳಿಗೆ ರಾತ್ರಿ ಹೊತ್ತಲ್ಲಿ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗುತ್ತಿದೆ. ಅವರು ಗಿರಣಿ ನಡೆಸಲಿ ಆದರೆ ಜನ ವಸತಿ ಇಲ್ಲದ ಪ್ರದೇಶದಲ್ಲಿ ನಡೆಸಲಿ, ಗಿರಣಿಯನ್ನು ಪರವಾನಗಿ ಪಡೆದು ನಡೆಸಲಿ ಇದಕ್ಕೆ ನಮ್ಮ ಸುತ್ತಮುತ್ತಲಿನವರ ತಕರಾರು ಏನಿಲ್ಲ. ಜನ ವಸತಿ ಪ್ರದೇಶದಲ್ಲಿ ಬಿಟ್ಟು ಬೇರೆ ಕಡೆಗೆ ತೆರವುಗೊಳಿಸಿ ಎಂದು ಈಗಾಗಲೇ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತಿ ಸಿಇಒ ಅವರಿಗೆ ಮನವಿ ಪತ್ರ ಸಲ್ಲಿಸಲಾಗಿತ್ತು. ಅದರಂತೆ ಸ್ಥಳಕ್ಕೆ ತಾಲೂಕು ಪಂಚಾಯತಿ ಅಧಿಕಾರಿಗಳು ಆಗಮಿಸಿ ಪರಿಶೀಲನೆ ನಡೆಸಿ, ಗಿರಣಿ ಮುಚ್ಚುವಂತೆ ಆದೇಶ ಮಾಡಿದ್ದಾರೆ. ಆದರೂ ಅದು ಪಾಲನೆಯಾಗಿಲ್ಲ. ರಾಮತ್ನಾಳ್ ಪಿಡಿಒ ಮೊಹಿನ್ ಪಾಷಾ ಈ ಕೂಡಲೇ ಗಿರಣಿ ಸ್ಥಳಾಂತರಕ್ಕೆ ಮುಂದಾಗಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುತ್ತದೆಂದು ಎಚ್ಚರಿಸಿದರು.

# ಡಿ 20 ಹಾಗೂ 21 ರಂದು ನಡೆಯುವ 11 ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಯಶಸ್ವಿಗೊಳಿಸಿ, :ಡಾ. ಹುಸೇನಪ್ಪ ಅಮರಾಪುರ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿ17 ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ ಗದಗ ವತಿಯಿಂದ , ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ ಸಂವಿಧಾನ ಭಾರತ ಕಾರ್ಯಕ್ರಮವನ್ನು ಯಾದಗಿರಿ ಸಾಹಿತಿಗಳಾಗಿ ಡಾ.ಜಯದೇವಿ ಗಾಯಕವಾಡ ಸಮ್ಮೇಳನದ ಸರ್ವಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಲಿದೆಂದು ದಲಿತ ಸಾಹಿತ್ಯ ಪರಿಷತ್ತು ತಾಲೂಕ ಘಟಕದ ಅಧ್ಯಕ್ಷ ಡಾ.ಹುಸೇನಪ್ಪ ಅಮರಾಪುರ ತಿಳಿಸಿದರು.**

ಬುದುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿದರು. ಸಮ್ಮೇಳನ ರಾಯಚೂರಿನ ಸಿದ್ದರಾಮಜಂಬಲದಿನ್ನಿ ಕಲ್ಯಾಣ



ಮಂಟಪದಲ್ಲಿ ಡಿಸೆಂಬರ್ 20 ಮತ್ತು 21 ರಂದು ನಡೆಯಲಿದ್ದು, ಸಮ್ಮೇಳನದ ಉದ್ಘಾಟನೆಯನ್ನು ಸಾಹಿತಿಗಳು ಹಾಗೂ ಸಂಸ್ಕೃತಿ ಚಿಂತಕರು ಪ್ರೊ.ಬರಗೂರು ರಾಮಚಂದ್ರಪ್ಪ ಮಾಡಲಿದ್ದು ಆಶಯಗಳನ್ನು ಡಾ.ಎಲ್.ಹನುಮಂತಯ್ಯ ನುಡಿಯಲಿದ್ದಾರೆ.ಸಮ್ಮೇಳನದಲ್ಲಿ ಸಂವಾದ ಗೋಷ್ಠಿಗಳು ನಡೆಯಲಿವೆ ಮತ್ತು ರಾಷ್ಟ್ರೀಯ ಗೌರವ ಪ್ರಶಸ್ತಿ ವಿಶೇಷ ಗೌರವ ಕುಮಾರ ತಾನೀಶ ಕೋಲಾರ ಭಾಜನರಾಗಿದ್ದಾರೆ. ಯುವಕರು, ಸಾಹಿತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ದಲಿತ ಸಾಹಿತ್ಯ ಪರಿಷತ್ತು ತಾಲೂಕ ಘಟಕ ಪ್ರಧಾನ ಕಾರ್ಯದರ್ಶಿ ರಾಮಣ್ಣ ಬೇರ್ಗಿ, ಉಪಾಧ್ಯಕ್ಷರಾದ ಆರುಣ ಕುಮಾರ ಬೇರ್ಗಿ,ಎಚ್.ಎಫ್ ಮಸ್ಕಿ,ಜಿಲ್ಲಾ ಉಪಾಧ್ಯಕ್ಷ ಡಾ.ಬಸವರಾಜ ಪಿ.ವಿರೇಶ ಕನ್ನಾರಿ, ಮೌನೇಶ್ ಜಾಲವಾಡಗಿ ಯರಿಯಪ್ಪ ಬೆಳಗುರ್ಕಿ ಉಪಸ್ಥಿತರಿದ್ದರು.

# ನಿವೃತ್ತರು ಅನಾಥರಲ್ಲ ದೇವರ ಮೇಲೆ ಭರವಸೆಯಿಟ್ಟು ಮುಂದೆ ಸಾಗಬೇಕು: ಕೆ.ವಿರುಪಾಕ್ಷಪ್ಪ

❑ ನೈಜ್ಯ ದೆಸೆ ನ್ಯೂಸ್

**ನಿವೃತ್ತಿ ಹೊಂದಿದವರು ನಮ್ಮಿಂದ ಏನೂ ಆಗಲ್ಲ ಅನ್ನೋ ಮನೋಭಾವನೆಯನ್ನು ಬಿಡಬೇಕು ಹೆಚ್ಚು ಚಟುವಟಿಕೆಯಲ್ಲಿರಬೇಕು. ಸಾಧ್ಯವಾದಷ್ಟು ಕ್ರಿಯಾ ಶೀಲರಾಗಬೇಕು. ತಲೆಯನ್ನು ಖಾಲಿ ಬಿಡಬಾರದು ಏನಾದರೊಂದು ಕೆಲಸದಲ್ಲಿ ತೊಡಗಿರಬೇಕು. ಮಕ್ಕಳು ಮೊಮ್ಮಕ್ಕಳು, ಗೆಳೆಯರ, ಜೊತೆ ಕಾಲ ಕಳೆಯುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಿ ಎಂದು ಮಾಜಿ ಸಂಸದ ಕೆ.ವಿರುಪಾಕ್ಷಪ್ಪ ಹೇಳಿದರು.**

ನಗರದ ಮಿಲಾಪ್ ಶಾದಿಮಹಲ್ ನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ನಿವೃತ್ತ ಹಾಗೂ ಪಿಂಚಣಿದಾರರ ಸಂಘ ತಾಲೂಕು ಘಟಕದಿಂದ ನಿವೃತ್ತ ಹಾಗೂ ಪಿಂಚಣಿ ನೌಕರರ ದಿನಾಚರಣೆ ಮತ್ತು 75 ಮೇಲ್ಪಟ್ಟ ನಿವೃತ್ತ ನೌಕರ–




ರಿಗೆ ಗೌರವ ಸನ್ಮಾನದ ಕಾರ್ಯಕ್ರಮದಲ್ಲಿ ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಿವೃತ್ತರು ಅನಾಥರಲ್ಲ. ದೇವರ ಮೇಲೆ ಭರವಸೆಯಿಟ್ಟು ಮುಂದೆ ಸಾಗಬೇಕು. ಹುಟ್ಟಿದವರು ಸಾಯಲೇಬೇಕು. ಸಾಯುವ ಮುನ್ನ ಚಿಂತನೆ ಮಾಡದೆ ಸಂತೋಷದ ಬದುಕು ಸಾಗಿಸಬೇಕು ಎಂದರು.

ನಂತರ ಜೆಡಿಎಸ್ ತಾಲೂಕು ಅಧ್ಯಕ್ಷ ಬಸವರಾಜ ನಾಡಗೌಡ ಮಾತನಾಡಿ, ಅನೇಕ ದೊಡ್ಡ ಪಟ್ಟಣಗಳಲ್ಲಿ ಹೋಮ್ ಫಾರ್ ಏಜ್ ಗಳು ಇದ್ದಾವೆ, ಈ ಹಿಂದಿನ ಕಾಲದಲ್ಲಿ ಊರುಗಳಲ್ಲಿ ಕೂಡು ಕುಟುಂಬ ಇರತ್ತಿದ್ದವು ಕ್ರಮೇಣ ಕ್ಷೀಣಿಸಿದೆ. ಸಂಕ್ರಮಣ, ಎಳ್ಳ ಅಮವಾಸ್ಯೆ ಬಂದರೆ.

ಕುಟುಂಬ ಸಮೇತ ಹೊಲಗದ್ದೆಗಳಿಗೆ ಹೋಗಿ ಪೂಜೆ ಪುನಸ್ಕಾರ ಮಾಡಿ, ಊಟ ಮಾಡಿ ಬರುತ್ತಿದ್ದ ಕಾಲವಿತ್ತು. ಈಗ ಅದು ಇಲ್ಲ. ನಿವೃತ್ತ ನೌಕರರು ಎಲ್ಲರೂ ಸೇರಿ ಬರುವುದಾದರೆ ಎಳ್ಳ ಅಮವಾಸ್ಯೆ ದಿನದಂದು ನಮ್ಮ ಹೊಲಗಳಿಗೆ ಔತಣಕೂಟ ಏರ್ಪಡಿಸುವೆ ಎಲ್ಲರೂ ಬರಬೇಕು ಎಂದು ನಿವೃತ್ತ ನೌಕರರಲ್ಲಿ ಮನವಿ ಮಾಡಿದರು. ತದನಂತರ ಮಿಲಾಪ್ ಶಾದಿಮಹಲ್ ಅಧ್ಯಕ್ಷ ಕೆ.ಜಿಲಾನಿಪಾಷಾ, ಕ್ಷೇತ್ರ ಶಿಕ್ಷಣಾಧಿಕಾರಿ ಬಸಲಿಂಗಪ್ಪ ಹಡೇದ್, ಎಸ್.ಟಿ.ಓ.ಉಪಖಜಾನೆ ನಾಗರಾಜ, ಮಾತನಾಡಿದರು. 75 ವರ್ಷ ಮೇಲ್ಪಟ್ಟ ಸುಮಾರು 45 ಜನರ ನಿವೃತ್ತ ನೌಕರರಿಗೆ ಸನ್ಮಾನಿಸಿ ಗೌರವಿಸಿದರು. ಬಡೆಬೇಸ್ ಶಾಲೆಯ ವಿದ್ಯಾರ್ಥಿನಿಯರಿಂದ ಡೊಳ್ಳು ಕುಣಿತ, ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಗಮನ ಸೆಳೆಯಿತು. ಈ ವೇಳೆ ವೇದಿಕೆ ಮೇಲೆ ಅಧ್ಯಕ್ಷ ಟಿ.ಅಯ್ಯಪ್ಪ, ಪ್ರಧಾನ ಕಾರ್ಯದರ್ಶಿ ವೆಂಕಟರೆಡ್ಡಿ, ಎಸ್.ಬಿ.ಐ ಬ್ಯಾಂಕ್ ಮುಖ್ಯ ಶಾಖೆಯ ವ್ಯವಸ್ಥಾಪಕ ಅಮೂಲ್ ಲೋಕಡಾ, ಕೆನರಾ ಬ್ಯಾಂಕ್ ವ್ಯವಸ್ಥಾಪಕ ಜೆ.ಬಾಬುರಾವ್, ಮಾನ್ವಿ ಬಸವಶ್ರೀ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಾ.ಶಂಕರಗೌಡ ಎಸ್.ಪಾಟೀಲ್, ಇದ್ದರು. ಬೀರಪ್ಪ ಶಂಭೋಜಿ ನಿರೂಪಣೆ ಮಾಡಿದರು.

## ನೇಮಕಾತಿ ಪ್ರಕಟಣೆ

ICMR ನೇಮಕಾತಿ 2025: 28 ವಿಜ್ಞಾನಿ–ಃ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು ICMR ಅಧಿಕೃತ ಅಧಿಸೂಚನೆಯ ಮೂಲಕ ನವೆಂಬರ್ 2025 ರ ಮೂಲಕ ವಿಜ್ಞಾನಿ–ಃ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದೆಹಲಿ–ನವದೆಹಲಿ, ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಐಸಿಎಂಆರ್ ನೇಮಕಾತಿ ಸಂಸ್ಥೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಪೋಸ್ಟ್ ಹೆಸರು ವಿಜ್ಞಾನಿ–ಬಿ ಖಾಲಿ ಹುದ್ದೆಗಳ ಸಂಖ್ಯೆ 28 ಹುದ್ದೆಗಳು ಅರ್ಹತೆ ಎಂಬಿಬಿಎಸ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20–ಡಿಸೆಂಬರ್–2025 ಈಗಲೇ ಅರ್ಜಿ ಸಲ್ಲಿಸಿ https://recruitment.icmr.org.in/scientist-bmed-nt-wofive/index.php/login ಅಧಿಕೃತ ವೆಬ್‌ಸೈಟ್: ಠಿಛಿಟಡಿ.ರಿಠಿ.ಟಿ ಕೊನೆಯ ದಿನಾಂಕ: 20–ಡಿಸೆಂಬರ್–2025

# ಜಿ.ಪಂ. ಸಹಾಯಕ ಲೆಕ್ಕಾಧಿಕಾರಿಯನ್ನು ತಕ್ಷಣ ಬಿಡುಗಡೆಗೊಳಿಸಲು ದಲಿತ ಸೇನೆ ಮನವಿ

ನೈಜ್ಯ ದೇಸಿ ನ್ಯೂಸ್

**ರಾಯಚೂರು: ಜಿಲ್ಲಾ ಪಂಚಾಯತ್ ಲೆಕ್ಕಶಾಖೆಯ ಸಹಾಯಕ ಲೆಕ್ಕಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನರಸಿಂಗ್ ರಾವ್ ಗುಜ್ಜರ್ ಅವರ ವಿರುದ್ಧ ಮಾನ್ಯ ಲೋಕಾಯುಕ್ತರು ನಡೆಸಿದ ದಾಳಿಯಲ್ಲಿ ಅಸಮತೋಲನಾ ಆಸ್ತಿ ಪತ್ತೆಯಾಗಿರುವ ಹಿನ್ನೆಲೆಯಲ್ಲಿ, ಅವರನ್ನು ತಕ್ಷಣವೇ ಕರ್ತವ್ಯದಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ಹಿಂದಿರುಗಿಸಬೇಕು ಎಂದು ದಲಿತ ಸೇನೆ ಜಿಲ್ಲಾ ಸಮಿತಿ ರಾಯಚೂರು ವತಿಯಿಂದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ.**



ಈ ಕುರಿತು ಮಾತನಾಡಿದ ದಲಿತ ಸೇನೆ ಜಿಲ್ಲಾ ಅಧ್ಯಕ್ಷ ಮಾರುತಿ ಚಿಕ್ಕಸೂಗೂರು ಅವರು, ನರಸಿಂಗ್ ರಾವ್ ಗುಜ್ಜರ್ ಅವರ ನಿವಾಸದ ಮೇಲೆ ಲೋಕಾಯುಕ್ತ ದಾಳಿ ನಡೆಸಿದ ಸಂದರ್ಭದಲ್ಲಿ ಅವರ ಆದಾಯಕ್ಕಿಂತ ಶೇ.89.41ರಷ್ಟು ಅಕ್ರಮ ಸಂಪಾದನೆಯ ಅಸಮತೋಲನಾ ಆಸ್ತಿ ಪತ್ತೆಯಾಗಿದ್ದು, ಸುಮಾರು 55 ಲಕ್ಷ ರೂ.ಗಳ ಚರ ಸ್ಥಾವರ ಆಸ್ತಿಯನ್ನು ಕಾನೂನುಬಾಹಿರವಾಗಿ ಸಂಪಾದಿಸಿರುವುದು ಬೆಳಕಿಗೆ ಬಂದಿದೆ ಎಂದು ತಿಳಿಸಿದರು.

ಇಂತಹ ಗಂಭೀರ ಆರೋಪಗಳ ಹಿನ್ನೆಲೆಯಲ್ಲಿ ಅವರು ಮುಂದುವರೆದು ರಾಯಚೂರು ಜಿಲ್ಲಾ ಪಂಚಾಯತ್ ಕಚೇ–ರಿಯಲ್ಲೇ ಕರ್ತವ್ಯ ನಿರ್ವಹಿಸುತ್ತಿದ್ದರೆ, ಸಂಸ್ಥೆಯ ಗೌರವಕ್ಕೆ ಧಕ್ಕೆಯಾಗುವುದರ ಜೊತೆಗೆ, ಪ್ರಭಾವಿ ಹುದ್ದೆಯಲ್ಲಿರುವ ಕಾರಣದಿಂದ ಸಾಕ್ಷ್ಯಗಳನ್ನು ತಿರುಚುವ ಹಾಗೂ ಲೋಕಾಯುಕ್ತ ತನಿಖೆಗೆ ಅಡ್ಡಿಯಾಗುವ ಸಾಧ್ಯತೆಗಳಿವೆ. ಆದ್ದರಿಂದ, ಅವರ ಓಓಡಿ ರದ್ದುಪಡಿಸಿ ತಕ್ಷಣವೇ ಕರ್ತವ್ಯದಿಂದ ಬಿಡುಗಡೆಗೊಳಿಸಿ, ಸದರಿ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ಬೇರೆ ಅಧಿಕಾರಿಗೆ ವಹಿಸುವುದು ಸೂಕ್ತ ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಸುಧಾರಿತ ಹಾಗೂ ಸುಗಮ ಆಡಳಿತದ ಹಿತದೃಷ್ಟಿಯಿಂದ ಈ ಬಗ್ಗೆ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದಲಿತ ಸೇನೆ ಜಿಲ್ಲಾ ಸಮಿತಿ ಮನವಿ ಮಾಡಿಕೊಂಡಿದೆ. ಈ ಸಂದರ್ಭದಲ್ಲಿ ಸುರೇಶ್ ಬಾಬು, ಜೆ.ಮಧುಕಾಂತ್, ಕೃಷ್ಣ ಮಾರ್ಷಲ್ ಸೇರಿದಂತೆ ಇನ್ನಿತರರು ಇದ್ದರು.

## ಇ–ಪೌತಿ ಖಾತೆಗೆ ಮಾಸಿಕ ಗುರಿ ನಿಗದಿ

ನೈಜ್ಯ ದೇಸಿ ನ್ಯೂಸ್

**ಹೂವಿನಹಡಗಲಿ: 'ತಾಲ್ಲೂಕಿನಲ್ಲಿ ಮೃತರ ಹೆಸರಿನಲ್ಲೇ ಉಳಿದಿರುವ 18,724 ಜಮೀನಿನ ಖಾತೆಗಳನ್ನು ಅವರ ವಾರಸುದಾರರಿಂದ ಅಗತ್ಯ ದಾಖಲೆಗಳನ್ನು ಪಡೆದು ಪ್ರತಿ ತಿಂಗಳು 100 ರಂತೆ ಇ–ಪೌತಿ ಖಾತೆ ಮಾಡಿಕೊಡಬೇಕು' ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಅವರು ಗ್ರಾಮ ಆಡಳಿತಾಧಿಕಾರಿಗಳಿಗೆ ಸೂಚಿಸಿದರು.**



ತಾಲ್ಲೂಕು ಕಚೇರಿಯಲ್ಲಿ ಸೋಮವಾರ ಕಂದಾಯ ಇಲಾಖೆಯ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ 2,491 ಖಾತೆಗಳನ್ನು ಇ–ಪೌತಿ ಮಾಡಲಾಗಿದೆ. ಬಾಕಿ ಇರುವ 16,233 ಖಾತೆಗಳನ್ನು ತಾಲ್ಲೂಕಿನಲ್ಲಿರುವ 28 ಗ್ರಾಮ ಆಡಳಿತಾಧಿಕಾರಿಗಳು ಮಾಸಿಕ ತಲಾ 100 ರಂತೆ ಎಲ್ಲ ಖಾತೆಗಳನ್ನು ಕಾಲಮಿತಿಯೊಳಗೆ ಮುಗಿಸಬೇಕು ಎಂದು ಹೇಳಿದರು. ತಾಲ್ಲೂಕಿನ 57 ಹೊಸ ಕಂದಾಯ ಗ್ರಾಮಗಳನ್ನು ಸರ್ಕಾರ ಘೋಷಿಸಿದೆ. ಈ ಪೈಕಿ 38 ಗ್ರಾಮಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ. ಬಾಕಿ 28 ಗ್ರಾಮಗಳ ಗ್ರಾಮಠಾಣಾ ನಕ್ಷೆಯನ್ನು ಅಂತಿಮಗೊಳಿಸಬೇಕು. ಬರುವ ಫೆಬ್ರವರಿಯಲ್ಲಿ ಸರ್ಕಾರ ಹಾವೇರಿಯಲ್ಲಿ ರಾಜ್ಯ ಮಟ್ಟದ ಸಮಾವೇಶ ಹಮ್ಮಿಕೊಳ್ಳಲಿದ್ದು, ಇಲ್ಲಿನ 1800 ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆಗೆ ಸಿದ್ಧತೆ ಮಾಡಿಕೊಳ್ಳಿ ಎಂದು ಸೂಚಿಸಿದರು. ತಾಲ್ಲೂಕಿನಲ್ಲಿ ಶೇ 79ರಷ್ಟು ಪಹಣಿಗಳಿಗೆ ಖಾತೆದಾರರ ಆಧಾರ್ ಲಿಂಕ್ ಮಾಡಲಾಗಿದ್ದು, ಶೇ 90ರಷ್ಟು ಸಾಧನೆ ಮಾಡಬೇಕು. ಅಭಿಲೇಖಾಲಯದ ಹಳೇ ಕಂದಾಯ ದಾಖಲೆಗಳ ಗಣಕೀಕರಣ ವೇಗ ಹೆಚ್ಚಿಸಬೇಕು. ಈಗ ಪ್ರತಿ ದಿನ ಏಳು ಸಾವಿರ ಪುಟಗಳ ಸ್ಕ್ಯಾನಿಂಗ್ ಮಾಡಲಾಗುತ್ತಿದ್ದು, ಸರ್ಕಾರದ ಸೂಚನೆ ಮೇರೆಗೆ 12,000 ಪುಟಗಳ ಸ್ಕ್ಯಾನಿಂಗ್ ಮಾಡಬೇಕು ಎಂದು ಹೇಳಿದರು. ತಹಶೀಲ್ದಾರ್ ಜಿ. ಸಂತೋಷಕುಮಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜಿ. ಪರಮೇಶ್ವರ ಇದ್ದರು.

# ಮಾನ್ವಿ ಪತ್ರಕರ್ತರ ಸಂಘಕ್ಕೆ ಅಧ್ಯಕ್ಷರಾಗಿ ಅಶೋಕ ತಡಕಲ್, ಪ್ರಧಾನ ಕಾರ್ಯದರ್ಶಿಯಾಗಿ ರವಿಕುಮಾರ್ ಆಯ್ಕೆ




ನೈಜ್ಯ ದೇಸಿ ನ್ಯೂಸ್

**ಮಾನ್ವಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮಾನ್ವಿ ತಾಲೂಕು ಘಟಕಕ್ಕೆ ಅಧ್ಯಕ್ಷರಾಗಿ ಅಶೋಕ ತಡಕಲ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರವಿಕುಮಾರ ಆಯ್ಕೆಯಾದರು. ಮಾನ್ವಿಯ ಪತ್ರಿಕಾ ಭವನದಲ್ಲಿ ಮಂಗಳವಾರ ಸಂಜೆ ತಾಲೂಕು ಘಟಕಕ್ಕೆ ಚುನಾವಣೆ ಪ್ರಕ್ರಿಯೆ ನಡೆಸಲಾಯಿತು.**

ಉಪಾಧ್ಯಕ್ಷರಾಗಿ ದೇವಪ್ಪ ಬ್ಯಾಗವಾಟ್, ಗೂಳಪ್ಪ ನೀರಮಾನ್ವಿ, ಕಾರ್ಯದರ್ಶಿಯಾಗಿ ಅಜಯಕುಮಾರ್, ಖಜಾಂಚಿಯಾಗಿ ವಿಜಯಕುಮಾರ ಆಯ್ಕೆಯಾದರು. ಇನ್ನೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮಾರೆಪ್ಪ ದೊಡ್ಡಮನಿ, ಪಿ.ಪರಮೇಶ, ಕೃಷ್ಣಮೂರ್ತಿ ಗುಡಿ, ಈಶಪ್ಪ ಬೈಲ್ ಮರ್ಚೆಡ್, ಚಂದ್ರಶೇಖರ್ ಮದ್ಲಾಪುರ, ಆನಂದ ಸ್ವಾಮಿ, ಶಿವಕುಮಾರ್ ಜಗ್ಲಿ ಆಯ್ಕೆಯಾದರು. ಆಯ್ಕೆ ಪ್ರಕ್ರಿಯೆ ನಡೆದ ಬಳಿಕ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ ಫಲಿತಾಂಶ ಪ್ರಕಟಿಸಿ ವಿಜೇತರಿಗೆ ಪ್ರಮಾಣಪತ್ರ ವಿತರಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ಧಯ್ಯ ಸ್ವಾಮಿ ಕುಕನೂರು, ಜಿಲ್ಲಾ ಉಪಾಧ್ಯಕ್ಷರಾದ ಮಹಾನಂದ ನಾಯಕ, ಸೂಗುರೇಶ ಎಸ್. ಗುಡಿ, ಜಿಲ್ಲಾ ಕಾರ್ಯದರ್ಶಿ ಬಸವರಾಜ ಬೋಗಾವತಿ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನಯ್ಯ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಲಕ್ಷ್ಮಿ ಪ್ರಸನ್ನ ಜೈನ್ , ಲಕ್ಷ್ಮಣ ಕಪಗಲ್, ತಾಯಪ್ಪ ಬಿ.ಹೊಸೂರು ಸೇರಿದಂತೆ ಅನೇಕರು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

## ಬಡವರಿಗೆ ಸಂಜೀವಿನಿಯಾದ ಎಂಆರ್‌ಐ

ನೈಜ್ಯ ದೇಸಿ ನ್ಯೂಸ್

**ಬಳ್ಳಾರಿ: ಎಂಆರ್‌ಐ (ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್) ಮಾಡಿಸಿ ಎಂದು ವೈದ್ಯರೇನಾದರೂ ಚೀಟಿ ಬರೆದುಕೊಟ್ಟರೆ ಬಡವರಿಗೆ, ಮಧ್ಯಮ ವರ್ಗದವರಿಗೆ ಎಲ್ಲಿಲ್ಲದ ಭಯ. ಸಾವಿರಾರು ರೂಪಾಯಿ ಶುಲ್ಕ, ತುರ್ತು ಪರಿಸ್ಥಿತಿ ಇದ್ದರೂ ವಾರಗಟ್ಟಲೆ ಕಾಯಬೇಕಾದ ಅನಿವಾರ್ಯತೆ.**



ಇಂಥ ಕಾರಣಗಳಿಂದಾಗಿ ಎಂ–ಎಆರ್‌ಐ ಎಂದರೆ ಎಂಥವರೂ ನಡುಗುವ ಪರಿಸ್ಥಿತಿ. ಆದರೆ, ಬಳ್ಳಾರಿ ಜಿಲ್ಲೆಯ ಅಧಿಕಾರಿಗಳು, ರಾಜ–ಕಾರಣಿಗಳ ಮುನ್ನೋಟ, ನಿರಂತರ ಪ್ರಯತ್ನದ ಫಲವಾಗಿ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ರಾಜ್ಯದಲ್ಲೇ ಅತ್ಯಾಧುನಿಕ ಎನಿಸಿದ ಎಂಆರ್‌ಐ ಯಂತ್ರವನ್ನು ಅನುಸ್ಥಾಪಿಸಲಾಗಿದ್ದು, ಬಡವ–ರಿಗೆ ಸಂಜೀವಿನಿಯಾಗಿ ಪರಿಣಮಿಸಿದೆ. ರಾಷ್ಟ್ರೀಯ ಖನಿಜನ ಅಭಿವೃದ್ಧಿ ನಿಗಮ ( ಎನ್‌ಎಂಡಿಸಿ)ದ 'ಕಾರ್ಪೊರೇಟರ್ ಸಾಮಾಜಿಕ ಹೊಣೆಗಾ–ರಿಕೆ (ಸಿಎಸ್‌ಆರ್)' ನಿಧಿಯ ಅಡಿಯಲ್ಲಿ ಖರೀದಿಸಿ ತರಲಾಗಿರುವ ಎಂಆರ್‌ಐ ಯಂತ್ರ ಜಿಲ್ಲೆಯ ಜನರಿಗೆ ವರವಾಗಿ ಪರಿಣಮಿಸಿದೆ. ಖಾಸಗಿ ಡೈಗ್ನಾಸ್ಟಿಕ್ ಲ್ಯಾಬ್‌ಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಎಂಆರ್‌ಐ ಸೇವೆ ಪಡೆಯಬೇಕಿದ್ದರೆ, ಕನಿಷ್ಠ ?8,000 ರಿಂದ ?10,000 ಹಣ ಖರ್ಚು ಮಾಡಬೇಕು. ಆದರೆ, ಜಿಲ್ಲಾ ಆಸ್ಪತ್ರೆಯಲ್ಲಿ ಅತ್ಯಂತ ಕಡಿಮೆ ಹಣದಲ್ಲಿ ಎಂಆರ್‌ಐ ಸೇವೆ ಪಡೆಯಬಹುದು. ಬಿಪಿಎಲ್ ಕಾರ್ಡುದಾರರು ಕನಿಷ್ಠ 1,150 (ಬ್ರೈನ್ ಪ್ಲೈನ್)ಗೆ ಎಂಐಆರ್ ಲಭ್ಯವಿದೆ. ವಿವಿಧ ರೀತಿಯ ಸೇವೆಗಳಿಗೆ ಬೇರೆ ಬೇರೆಯದ್ದೇ ಬೆಲೆ ನಿಗದಿ ಮಾಡಲಾಗಿದೆ. ಆದ–ರೆ, ಅತ್ಯಂತ ಕಡಿಮೆ ಹಣ ನಿಗದಿ ಮಾಡಲಾಗಿದೆ. ಬಿಪಿಎಲ್ ಕಾರ್ಡ್ ಇಲ್ಲದವರಿಗೂ ಕಡಿಮೆ ದರದಲ್ಲಿ ಸೇವೆ ಒದಗಿಸಲಾಗುತ್ತದೆ. ಫಿಲಿಪ್ಸ್ ಕಂಪನಿಯ ಈ ಯಂತ್ರ ?12.14 ಕೋಟಿಗಳಾಗಿದ್ದು, ಮಂಗಳೂರು ಹೊರತುಪಡಿಸಿದರೆ, ಇಂಥ ಅತ್ಯಾಧುನಿಕ ಯಂತ್ರ ಇರುವುದು ಬಳ್ಳಾ–ರಿಯಲ್ಲಿ ಮಾತ್ರ. ನಿತ್ಯ 4 ರಿಂದ 5 ಮಂದಿ ಈ ಸೇವೆ ಪಡೆಯುತ್ತಿದ್ದಾರೆ. ವರದಿಗೆ ಹೆಚ್ಚು ಹೊತ್ತು ಕಾಯುವ ಅಗತ್ಯವೂ ಇಲ್ಲ. ಕೆಲವೇ ಗಂಟೆಗಳಲ್ಲಿ ವರದಿ ಲಭ್ಯವಾಗುತ್ತಿದೆ ಎಂದು ಆಸ್ಪತ್ರೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಎಂಆರ್‌ಐ ಕೇಂದ್ರದ ಉದ್ಘಾಟನೆ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಸಂಸದ ಇ. ತುಕಾರಾಂ, ಬಡವರಿಗೆ ಉಪಯೋಗವಾಗುವ ಇದು ನನ್ನ ಕನಸಿನ ಯೋಜನೆಯಾಗಿತ್ತು ಎಂದು ಹೇಳಿದ್ದರು.

# ಪಲ್ಸ್ ಪೋಲಿಯೊ ಗುರಿ ಸಾಧಿಸಿ ಪೋಲಿಯೊದಿಂದ ಮಕ್ಕಳು ವಂಚಿತರಾಗಬಾರದು ತಹಸೀಲ್ದಾರ ಅರುಣ್ ದೇಸಾಯಿ

ನೈಜ್ಯ ದೇಸಿ ನ್ಯೂಸ್

**ಸಿಂಧನೂರು: ಡಿ.17– ಎಲ್ಲಾ ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡುವ ಮೂಲಕ ಪಲ್ಸ್ ಪೋಲಿಯೊ ಅಭಿಯಾನವನ್ನು ಯಶಸ್ವಿಗೊಳಿಸಿ ಎಂದು ತಹಸೀಲ್ದಾರ ಅರುಣ ಹೆಚ್ ದೇಸಾಯಿ ಅಧಿಕಾರಿಗಳಿಗೆ ಸೂಚಸಿದರು.**




ತಹಸೀಲ್ದಾರ್ ಕಛೇರಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಎರಡನೆಯ ತಾಲೂಕಾ ಮಟ್ಟದ ಟಾಸ್ಕ್ ಪೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ದಿನಾಂಕ 21 ರಂದು ಆಯಾ ಗ್ರಾಮ ಪಂಚಾಯತಿ ಪಿಡಿಓ ರವರು ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಹಾಗೂ ಗ್ರಾಮಗಳಲ್ಲಿಯ ದೇವಸ್ಥಾನ, ಚರ್ಚ್, ಮಸೀದಿಗಳಲ್ಲಿ ಮೈಕ್ ಮೂಲಕ ಹಾಗೂ ಡಂಗೂರ ಬಾರಿಸುವ ಮುಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು, ನಗರಸಭೆ ಕಸದ ವಾಹನದ ಮೂಲಕ ಸಹ ಪ್ರಚಾರ ಮಾಡಬೇಕು ಎಂದರು.

ಬಸ ನಿಲ್ದಾಣ. ರೈಲ್ವೆ ಸ್ಟೇಷನ್ ಗಳಲ್ಲಿ ಪೋಲಿಯೊ ಬೂತ ಮಾಡಿ ಮಕ್ಕಳಿಗೆ ಪೋಲಿಯೊ ಹಾಕಬೇಕು ಯಾವ ಮಗು ಸಹ ಪೋಲಿಯೊದಿಂದ ವಂಚಿತರಾಗದಂತೆ ನೋಡಿ ಕೊಳ್ಳುವ ಜವಾಬ್ದಾರಿಯು ಆರೋಗ್ಯ ಇಲಾಖೆಯೊಂದಿಗೆ ಎಲ್ಲಾ ಇಲಾಖೆಯ ಅಧಿಕಾರಿಗಳ ಜವಾಬ್ದಾರಿ ಯಾಗಿದೆ ಎಂದರು. ನಗರದಲ್ಲಿ 33 ಬೂತ್, 9 ಸಂಚಾರ ತಂಡಗಳು, 2 ಮೊಬೈಲ್ ತಂಡ ನಗರದ ಕಾರ್ಯನಿರ್ವಹಿಸಲಿದ್ದು ಎಲ್ಲರೂ ಸಹಕರಿಸಿ ಎಂದರು.

ತಾಲೂಕಾ ಆರೋಗ್ಯಾಧಿಕಾರಿ ಡಾ ಅಯ್ಯನಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಬಸಲಿಂಗಪ್ಪ, ಶ್ರೀ ಲಿಂಗನಗೌಡ್ರು ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಅಶೋಕ, ವೈದ್ಯಾಧಿಕಾರಿ ಡಾ ಮೌನೇಶ್, ನಗರ ಪ್ರಾಥ–'ಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಮೇರಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರಂಗನಾಥ ಗುಡಿ, ಸಂಗನಗೌಡ ಪಾಟೀಲ. ಕ್ಷೇತ್ರ ಆರೋಗ್ಯ ಶಿಕ್ಷಣಾದಿಕಾರಿ ಗೀತಾ ಹಿರೆಮಠ, ಬಿಪಿಎಮ್ ತ್ರಿವೇಣಿ, ಹನುಮಂತ ಮಲ್ಲಪ್ಪ, ಸೇರಿದಂತೆ ಜೇಸ್ಕಾ, ಸಾರಿಗೆ, ಕಾರ್ಮಿಕ ಇಲಾಖೆ ಸಿಬ್ಬಂದಿ, ಪಿಹೆಚ್‌ಸಿಓ ಹಾಗೂ ಇತರರು ಉಪಸ್ಥಿತರಿದ್ದರು.

# ಹಿರೇ ಹಳ್ಳದ ಬ್ರಿಡ್ಜ್ ಕಾಮಗಾರಿಯು ಕಳಪೆಯಿಂದ ಕೂಡಿದ್ದು, ಸರಿಪಡಿಸುವಂತೆ ಅಧಿವೇಶನದಲ್ಲಿ ಧ್ವನಿ ಎತ್ತಿದ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ

ನೈಜ್ಯ ದೇಸಿ ನ್ಯೂಸ್

**ಬೆಳಗಾವಿ: ಚಳಿಗಾಲದ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿಯವರು ಸಿಂಧನೂರು ಹಿರೇ ಹಳ್ಳದ ಬ್ರಿಡ್ಜ್ ಕಾಮಗಾರಿಯು ಕಳಪೆಯಿಂದ ಕೂಡಿದ್ದು, ಸರಿಪಡಿಸುವಂತೆ ಹಾಗೂ ಬಾಕಿ ಉಳಿದಿರುವ ಕಾಮಗಾರಿಯನ್ನು ಪೂರ್ಣ ಗೊಳಿಸುವಂತೆ ಅಧಿವೇಶನದಲ್ಲಿ ಧ್ವನಿ ಎತ್ತಿದ್ದಾರೆ.**



ವಿಧಾನ ಪರಿಷತ್ ಸದಸ್ಯರು ಸದನದಲ್ಲಿ ಕೇಳಿದ ಪ್ರಶ್ನೆಗೆ ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳೆ ಅವರು ಉತ್ತರಿಸಿ, ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿದ್ದು, ಯಾವುದೇ ಕಳಪೆ ಕಾಮಗಾರಿ ಆಗಿಲ್ಲವೆಂದು ಅಧಿಕಾರಿಗಳು ಹೇಳಿದ್ದಾರೆ. ಮತ್ತೊಮ್ಮೆ ವಿಧಾನ ಪರಿಷತ್ ಸದಸ್ಯರು ಅಧಿಕಾರಿಗಳ ಸಮಕ್ಷಮದಲ್ಲಿ ಪರಿಶೀಲಿಸುವಂತೆ ಜಾರಿಕೊಂಡಿದ್ದಾರೆ.

ವಿಧಾನ ಪರಿಷತ್ ಸದಸ್ಯರು ಸದನದಲ್ಲಿ ಧ್ವನಿ ಎತ್ತಿದಂತೆ ರಾಷ್ಟ್ರೀಯ ಹೆದ್ದಾರಿ 150 ಎ ರಲ್ಲಿ ಹಿರೇ ಹಳ್ಳಕ್ಕೆ ನಿರ್ಮಿಸಲ್ಪಟ್ಟ ಕಾಮಗಾರಿ ಗುಣಮಟ್ಟದಿಂದ ನಿರ್ಮಿಸಿಲ್ಲ. ಜೊತೆಗೆ ಲೈಟಿಂಗ್ ವ್ಯವಸ್ಥೆ ಸೇರಿದಂತೆ ಇತರೆ ಸೌಕರ್ಯಗಳು ಇರುವುದಿಲ್ಲ ಎಂದು ಅಧಿವೇಶನದ ಸಭಾಪತಿಯವರಲ್ಲಿ ಮನವಿ ಮಾಡಿಕೊಂಡರು.

# ನಗರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಕ್ಕೆ ಪಾಲಿಕೆ ಆಯುಕ್ತ ಜುಬಿನ್ ಮೊಹೊಪಾತ್ರ ಭೇಟಿ, ಪರಿಶೀಲನೆ

ನೈಜ್ಯ ದೇಸಿ ನ್ಯೂಸ್

**ರಾಯಚೂರು: ಡಿಸೆಂಬರ್ 17 (ಕರ್ನಾಟಕ ವಾರ್ತೆ): ರಾಯಚೂರು ನಗರವನ್ನು ಸುಂದರ ನಗರವನ್ನು ರೂಪಿಸುವ ನಿಟ್ಟಿನಲ್ಲಿ ಈಗಾಗಲೇ ರಾಯಚೂರು ಮಹಾನಗರ ಪಾಲಿಕೆಯ ಪರಿಸರ ವಿಭಾಗದಿಂದ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಕ್ಕೆ ಮಂಗಳವಾರ ದಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಭೇಟಿ ನೀಡಿ ಪರಿಶೀಲನೆ ಮಾಡಿದರು.**




ನಗರದ ಸೌಂದರ್ಯೀಕರಣಗಳ ವಿವಿಧ ಸ್ಥಳಗಳನ್ನು ಮತ್ತು ವಿವಿಧ ವೃತ್ತಗಳನ್ನು ವರದಿಯನ್ನು ಪರಿಶೀಲಿಸಲು ನಗರಾದ್ಯಂತ ಪರಿಶೀಲನೆ ಕೈಗೊಂಡು ನಗರದ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಭವಿಷ್ಯದ ಸುಂದರೀಕರಣ ಯೋಜನೆಗಳ ಸಿದ್ಧತೆ ಮತ್ತು ಯೋಜನಾ ಸಿದ್ಧತೆಗಾಗಿ ಪರಿಶೀಲಿಸಿ ಖಾತರಿ ಪಡಿಸುಕೊಳ್ಳಲಾಯಿತು. ಈ ವೇಳೆ ಅಧಿಕಾರಿಗಳ ತಂಡದೊಂದಿಗೆ ಅಂಬೇಡ್ಕರ್ ವೃತ್ತ, ನಗರ ಬಸ್ ನಿಲ್ದಾಣ, ಆರ್.ಟಿ.ಓ ವೃತ್ತ, ರಾಮ ಮಂದಿರ ಕಲ್ಯಾಣಿ ಮತ್ತು ರೈಲ್ವೇ ನಿಲ್ದಾಣ ವೃತ್ತ ಸೇರಿದಂತೆ ನಗರದ ಪ್ರಮುಖ ಜಂಕ್ಷನ್ಗಳಿಗೆ ಭೇಟಿ ನೀಡಿ, ಈ ಸ್ಥಳಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾದ ಸುಂದ–ರೀಕರಣ, ಗೋಡೆ ಚಿತ್ರಕಲೆ (ವಾಲ್ ಪೇಂಟಿಂಗ್) ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಯೋಜನೆಯ ಕುರಿತು ಚರ್ಚಿಸಲಾಯಿತು.

ಈ ವೇಳೆ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಮಾತನಾಡಿ, ನಗರದ ಪ್ರಮುಖ ಸ್ಥಳಗಳನ್ನು ಸುಂದರವಾಗಿ ಮಾರ್ಪಡಿಸುವ ಸಲುವಾಗಿ ವ್ಯವಸ್ಥಿತ ಯೋಜನೆ ರಚಿಸಲು ಈ ಭೇಟಿಯನ್ನು ನಡೆಸಲಾಗಿದೆ. ನಾವು ಈ ಸ್ಥಳಗಳಿಗೆ ಸಂಬಂಧಿಸಿದ ವಿವರವಾದ ಯೋಜನೆಗಳನ್ನು ರೂಪಿಸುತ್ತಿದ್ದೇವೆ. ಮತ್ತು ಶೀಘ್ರದಲ್ಲೇ ಕಾರ್ಯಗಳನ್ನು ಪ್ರಾರಂಭಿಸಲು ತಯಾರಿ ನಡೆಸುತ್ತಿದ್ದೇವೆ ಎಂದು ಹೇಳಿದರು.



ನಂತರ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಕಾಮಗಾರಿಗೆ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿ, ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಪಿಡಬ್ಲ್ಯೂಡಿ ಇಲಾಖೆ ಮತ್ತು ಆರ್.ಡಿ.ಎ ಜಂಟಿ ಪ್ರಯತ್ನದಿಂದ ವೃತ್ತದ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಕೋಟೆಯ ಪುನಃಸ್ಥಾಪನೆ ಕಾರ್ಯವು ಒಂದು ತಿಂಗಳಿಗೂ ಹೆಚ್ಚು ಕಾಲ ನಡೆಯುತ್ತಿದ್ದು, ಅದು ಮುಕ್ತಾಯಗೊಳ್ಳುವ ಹಂತದಲ್ಲಿದೆ. ಮತ್ತು ಶೀಘ್ರದಲ್ಲೇ ವರ್ಣರಂಜಿತ ಬೆಳಕಿನೊಂದಿಗೆ ಸಾರ್ವಜನಿಕರಿಗೆ ಮುಕ್ತವಾಗಲಿದೆ ಎಂದರು. ಇದೇ ಸಂದರ್ಭದಲ್ಲಿ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರಾದ ಜೈಪಾಲ್ ರೆಡ್ಡಿ, ವಲಯ ಆಯುಕ್ತರಾದ ಮಲ್ಲಿಕಾರ್ಜುನ, ಕಾರ್ಯಪಾಲಕ ಅಭಿಯಂತರಾದ ಬಸವರಾಜ ಹೆಬ್ಬಾಳ, ಸಹಾಯಕ ಅಭಿಯಂತರರಾದ ಮಹೇಶ ಸೇರಿದಂತೆ ಪಾಲಿಕೆಯ ವಿವಿಧ ತಾಂತ್ರಿಕ ವಿಭಾಗಗಳ ಹಿರಿಯ ಮತ್ತು ಕಿರಿಯ ಅಧಿಕಾರಿಗಳು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂ ಡಿ ತಹಫ್ರುಜಿ ವ ಸಮಜಿ ಟಿಬ್

ತಹಾಫುಜಿ ವಾ ಸಮಾಜಿ ಟಿಬ್ M D Tahaffuzi wa Samaji Tib (Preventive and Social medicine) (ತಡೆಗಟ್ಟುವಿಕೆ ಮತ್ತು ಸಾಮಾಜಿಕ ಔಷಧ) ದಲ್ಲಿ ಪಿಜಿ ಪದವಿಯು ಸಾರ್ವಜನಿಕ ಆರೋಗ್ಯ, ರೋಗ ತಡೆಗಟ್ಟುವಿಕೆ ಮತ್ತು ಆರೋಗ್ಯ ಪ್ರಚಾರದ ಮೇಲೆ ಕೇಂದ್ರೀಕರಿಸುವ ಸ್ನಾತಕೋತ್ತರ ಪದವಿಯಾಗಿದೆ. ಇದು ತಡೆಗಟ್ಟುವ ಔಷಧ ಮತ್ತು ಸಾಮಾಜಿಕ ಆರೋಗ್ಯ ವಿಜ್ಞಾನ ಕ್ಷೇತ್ರಕ್ಕೆ ಸೇರಿದೆ. ಸಾಮಾನ್ಯವಾಗಿ 2–3 ವರ್ಷಗಳ ಕಾಲ ನಡೆಯುವ ಈ ಕೋರ್ಸ್, ರೋಗ ತಡೆಗಟ್ಟುವಿಕೆ, ಸಮುದಾಯ ಆರೋಗ್ಯವನ್ನು ಸುಧಾರಿಸುವುದು ಮತ್ತು ಆರೋಗ್ಯ ನೀತಿಗಳನ್ನು ನಿರ್ವಹಿಸುವ ತಂತ್ರಗಳನ್ನು ಪರಿಶೀಲಿಸುತ್ತದೆ. ಇದು ಸಾರ್ವಜನಿಕ ಆರೋಗ್ಯ ಸಂಶೋಧನೆಯೊಂದಿಗೆ ವೈದ್ಯಕೀಯ ಅಭ್ಯಾಸವನ್ನು ಸಂಯೋಜಿಸುತ್ತದೆ. ಒಆ ತಹಫ್ಫುಝು ವ ಸಮಾಜಿ ತಿಬ್ಬ್ ಯುನಾನಿ ವೈದ್ಯಕೀಯದ ಒಂದು 3 ವರ್ಷದ ಪೋಸ್ಟ್‌ಗ್ರಾಜುಯೇಟ್ ಕೋರ್ಸ್ ಆಗಿದ್ದು, ಇದು ಸಾರ್ವಜನಿಕ ಆರೋಗ್ಯ, ರೋಗ ನಿರೋಧನೆ ಮತ್ತು ಸಮುದಾಯ ಕಲ್ಯಾಣದ ಮೇಲೆ ಕೇಂದ್ರೀಕರಿಸಿದೆ. ಈ ಕೋರ್ಸ್‌ನಲ್ಲಿ ಯುನಾನಿ ತತ್ವಗಳು ಮತ್ತು ಆಧುನಿಕ ಸಾರ್ವಜನಿಕ ಆರೋಗ್ಯ ಪದ್ಧತಿಗಳು ಎರಡನ್ನೂ ಒಟ್ಟುಗೂಡಿಸಿ ಬೋಧಿಸಲಾಗುತ್ತದೆ ಈ ಕೋರ್ಸ್ ಅನ್ನು ಓIUM (National Institute of Unani Medicine), ಬೆಂಗಳೂರು ಮುಂತಾದ ಸಂಸ್ಥೆಗಳು ನೀಡುತ್ತವೆ. ಪ್ರವೇಶಕ್ಕೆ ಃಗಿಒಖ ಅರ್ಹತೆ ಅಗತ್ಯವಾಗಿದ್ದು, ಸಾಮಾನ್ಯವಾಗಿ ಪ್ರವೇಶ ಪರೀಕ್ಷೆ (NEET/PG AYUSH ಆಧಾರಿತ) ಮೂಲಕ ಪ್ರವೇಶ ದೊರೆಯುತ್ತದೆ. ? ಸಾರ್ವಜನಿಕ ಆರೋಗ್ಯ (Public Health),ರೋಗ ನಿರೋಧನೆ (Disease Prevention), ಸಮುದಾಯ ಆರೋಗ್ಯ ಉತ್ತೇಜನ, ಪರಿಸರ ಮತ್ತು ಉದ್ಯೋಗ ಆರೋಗ್ಯ, ವಿಪತ್ತು ನಿರ್ವಹಣೆ (Disaster Management) ಈ ಇಲಾಖೆಯು ಸಂಶೋಧನೆ, ಶಿಕ್ಷಣ ಮತ್ತು ತರಬೇತಿ, ಸಮುದಾಯ ಸಂಪರ್ಕ ಸೇವೆಗಳು ಮತ್ತು ಆರೋಗ್ಯ ಪ್ರಚಾರ ಅಭಿಯಾನಗಳ ಮೂಲಕ ಜನರ ಜೀವಿತಾವಧಿಯಲ್ಲಿ ಮತ್ತು ಜನಸಂಖ್ಯೆಯ ಎಲ್ಲಾ ವಿಭಾಗಗಳಲ್ಲಿ ಆರೋಗ್ಯವನ್ನು ಉತ್ತೇಜಿಸಲು ಸಮರ್ಪಿತವಾಗಿದೆ. ಸಾಹಿತ್ಯ ಸಂಶೋಧನೆ, ಪೌಷ್ಟಿಕ ಸಾಂಕ್ರಾಮಿಕ ರೋಗಶಾಸ್ತ್ರ, ಔಷಧ-ಸಾಂಕ್ರಾಮಿಕ ರೋಗಶಾಸ್ತ್ರ, ಅಪಾಯದ ಅಂಶ ಪ್ರಯೋಗಗಳು ಮತ್ತು ತಡೆಗಟ್ಟುವ ಪ್ರಯೋಗಗಳ ಮೂಲಕ ತಡೆಗಟ್ಟುವ ಆರೋಗ್ಯ ರಕ್ಷಣಾ ಸೇವೆಗಳಲ್ಲಿ ಯುನಾನಿ ವೈದ್ಯಕೀಯ ಪದ್ಧತಿಯ ಸಾಮರ್ಥ್ಯವನ್ನು ಬಳಸಿಕೊಳ್ಳುವುದು ಇಲಾಖೆಯ ಪ್ರಮುಖ ಒತ್ತು. ಸಮುದಾಯಕ್ಕೆ ಪ್ರಚಾರ ಮತ್ತು ತಡೆಗಟ್ಟುವ ಆರೋಗ್ಯ ರಕ್ಷಣಾ ಸೇವೆಗಳನ್ನು ಒದಗಿಸಲು ಇಲಾಖೆಯು ನಿಯಮಿತವಾಗಿ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ಶಾಲಾ ಮಕ್ಕಳಿಗೆ ಆರೋಗ್ಯ ಶಿಬಿರಗಳು ಮತ್ತು ಮೊಬೈಲ್ ಚಿಕಿತ್ಸಾಲಯಗಳನ್ನು ಆಯೋಜಿಸುತ್ತದೆ. ಇದರ ಹೊರತಾಗಿ, ಇಲಾಖೆಯು NIUM ಆಸ್ಪತ್ರೆಯಲ್ಲಿ ಆರೋಗ್ಯ ಪ್ರಚಾರ ಘಟಕ ಮತ್ತು IEC ಘಟಕದ ಮೂಲಕ ಸಮುದಾಯಕ್ಕೆ ಸೇವೆಗಳನ್ನು ಒದಗಿಸುತ್ತಿದೆ. ಇಲಾಖೆಯು 3D ಮಾದರಿಗಳ ಅಗತ್ಯ ಸಂಗ್ರಹ ಮತ್ತು ಉತ್ತಮವಾಗಿ ವ್ಯಾಖ್ಯಾನಿಸಲಾದ ಮೌಂಟೆಡ್ ಚಾರ್ಟ್‌ಗಳೊಂದಿಗೆ ಸಾರ್ವಜನಿಕ ಆರೋಗ್ಯ ವಸ್ತುಸಂಗ್ರಹಾಲಯವನ್ನು ಹೊಂದಿದೆ. ಇದು ನೀರಿನ ಗುಣಮಟ್ಟ ಪರೀಕ್ಷೆ, ಗಾಳಿಯ ಗುಣಮಟ್ಟದ ಮೇಲ್ವಿಚಾರಣೆ ಮತ್ತು ಪೌಷ್ಟಿಕಾಂಶದ ಮೌಲ್ಯಮಾಪನಕ್ಕಾಗಿ ಅಗತ್ಯವಾದ ಸಾಧನಗಳನ್ನು ಹೊಂದಿದೆ. ತಹಫುಜಿ ವಾ ಸಮಜಿ ಟಿಬ್ ವಿಷಯದ ಕುರಿತು ಉಲ್ಲೇಖ ಮತ್ತು ಪಠ್ಯಪುಸ್ತಕಗಳನ್ನು ಹೊಂದಿರುವ ಸೆಮಿನಾರ್ ಗ್ರಂಥಾಲಯವನ್ನು ಸಹ ಇಲಾಖೆ ನಿರ್ವಹಿಸುತ್ತಿದೆ.

## ಡಿಸೆಂಬರ್ 22ರಂದು ಸಿರಿಧಾನ್ಯಗಳ ಜಾಥಾ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 17 (ಕರ್ನಾಟಕ ವಾರ್ತೆ): ಇಲ್ಲಿನ ಕೃಷಿ ಇಲಾಖೆಯಿಂದ ಸಿರಿಧಾನ್ಯ, ಸಾವಯವ ಉತ್ಪನ್ನಗಳ ಕುರಿತು ಹಾಗೂ ಗ್ರಾಹಕರಿಗೆ ಜಾಗೃತಿ ಮೂಡಿಸಲು ಸಿರಿಧಾನ್ಯಗಳ ಜಾಥಾ ಕಾರ್ಯಕ್ರಮ-2025ರ ಡಿಸೆಂಬರ್ 22ರ ಬೆಳಿಗ್ಗೆ 6ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ಜಾಗೃತಿ ನಡಿಗೆಯಲ್ಲಿ ಎಲ್ಲರೂ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಕೋರಿದ್ದರೆ.**

ಜಾಗೃತಿ ನಡಿಗೆವು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ ಸಭಾಂಗಣದ ಮುಂಭಾಗದಿಂದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬಸವೇಶ್ವರ ವೃತ್ತ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದವರೆಗೆ ಹಮ್ಮಿಕೊಳ್ಳಲಾಗಿದ್ದು, ಎಲ್ಲರೂ ಭಾಗವಹಿಸಿ ರೈತರಿಗೆ ಮತ್ತು ಗ್ರಾಹಕರಿಗೆ ಉತ್ತೇಜನ ನೀಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಟಕಣೆಯಲ್ಲಿ ತಿಳಿಸಿದ್ದಾರೆ.

# "ರೇಷ್ಮೆ ಬಟ್ಟೆ" ಕಾದಂಬರಿ ಅವಲೋಕನ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಕನ್ನಡ ಸಾಹಿತ್ಯಲೋಕದಲ್ಲಿ ಕಾದಂಬರಿ ಕ್ಷೇತ್ರಕ್ಕೊಂದು ವಿಶಿಷ್ಟ ಸ್ಥಾನವಿದೆ. ಗದ್ಯರೂಪದ ದೀರ್ಘವಾದ ಕಾಲ್ಪನಿಕ ಕಥನಗಳಲ್ಲಿನ ಪಾತ್ರಗಳು ಕಥಾ ಹಂದರ ಮತ್ತು ಘಟನೆಗಳು ಜೀವನದ ಸತ್ಯಗಳನ್ನು ಸಾಮಾಜಿಕ ವ್ಯವಸ್ಥೆಯನ್ನು, ಮಾನವ ಸಂಬಂಧಗಳನ್ನು ಬಿಚ್ಚಿಡುವ ಪ್ರಯತ್ನವನ್ನು ಕಾದಂಬರಿಗಳಲ್ಲಿ ಕಾಣಬಹುದಾಗಿದೆ ಎಂದು ಸ್ಥಳೀಯ ಜೆ-ಎಸ್.ಜಿ ವಿಜ್ಞಾನ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ದಿನಕರ ಜೋಶಿ ಹೇಳಿದರು.**

ಅವರು ಪಟ್ಟಣದ ಪ್ರತಿಭಾಲೋಕ ಕರಿಯರ್ ಅಕಾಡೆಮಿಯಲ್ಲಿ ಸ್ಥಳೀಯ ಕನ್ನಡ ಸಂಘದ ವತಿಯಿಂದ ಆಯೋಜಿಸಿದ್ದ ಕಾದಂಬರಿ ಅವಲೋಕನ ಕಾರ್ಯಕ್ರಮದಲ್ಲಿ ವಸುಧೇಂದ್ರ ಅವರು ಬರೆದ 'ರೇಷ್ಮೆ ಬಟ್ಟೆ' ಕಾದಂಬರಿಯ ಅವಲೋಕನ ಮಾಡಿ ಭಾನುವಾರ ಸಂಜೆ ಮಾತನಾಡಿದರು. ಕಾದಂಬರಿಗಳಲ್ಲಿ ಹಲವು ಕವಲುಗಳನ್ನು ಕಾಣಬಹುದಾಗಿದ್ದು ವಸುಧೇಂದ್ರ ಅವರ ರೇಷ್ಮೆ ಬಟ್ಟೆ ಕಾದಂಬರಿ ಆಸಕ್ತಿದಾಯಕವಾದುದಾಗಿದೆ. ರೇಷ್ಮೆ ಬಟ್ಟೆ ಜಗತ್ತಿಗೆ ಪರಿಚಯಿಸಿಕೊಂಡ ಹಿನ್ನೆಲೆಗಳನ್ನು ಬರೆಯಲು ಹೊರಟು ನಾಲ್ಕೂವರೆ ವರ್ಷಗಳ ಕಾಲ 50ಕ್ಕೂ ಅಧಿಕ ಗ್ರಂಥಗಳನ್ನು ಅಧ್ಯಯನ ಮಾಡಿ, ಅಂತರ್ಜಾಲದ ಪುಟಗಳನ್ನು ಹೆಕ್ಕಿ ಏಳು ತಿಂಗಳ ಕಾಲ ಬರೆವಣಿಗೆ ಮಾಡಿ ಐದು ಅಧ್ಯಾಯಗಳಲ್ಲಿ 450 ಪುಟಗಳ ಕಾದಂಬರಿಯನ್ನು ಓದುಗನಿಗೆ ಇಡುತ್ತಾರೆ.



ರೇಷ್ಮೆ ಬಟ್ಟೆ ಜಗತ್ತಿಗೆ ಪರಿಚಯಿಸಿಕೊಳ್ಳಲು ಕಾರಣವಾದ ಘಟನೆಯ ಎಳೆ ಹಿಡಿದು ಹೋಗುವ ಅವರು ಒಂದನೆಯ ಹಾಗೂ ಎರಡನೆಯ ಶತಮಾನದ ಅವಧಿಯಲ್ಲಿ ನಡೆದ ಘಟನಾವಳಿಗಳನ್ನು ಯವನರು, ರೋಮನ್ನರು, ಗ್ರೀಕರು, ಪಾರ್ಥಿಯನ್ನರು, ಚೀನಾ ಸಾಮ್ರಾಜ್ಯ, ಕಾನಿಷ್ಕನ ಆಡಳಿತ ಹೂಣರ ದಾಳಿಗಳು, ಬುದ್ಧನ ಸಂದೇಶಗಳ ಪ್ರಸಾರಕ್ಕೆ ಅವರ ಅನುಯಾಯಿಗಳು ಬಿಕ್ಕುಗಳು ಪಡುವ ಪರಿಪಾಟಲುಗಳು, ಅವರ ತ್ಯಾಗ ಜೀವನ, ಅಂದಿನ ಸಾಮಾಜಿಕ ಆರ್ಥಿಕ ಸ್ಥಿತಿಗಳು, ವ್ಯಾಪಾರ, ಕೃಷಿ, ವಾಣಿಜ್ಯ ಗಳ ಮೂಲಕ ಸಾಮ್ರಾಜ್ಯ ವಿಸ್ತರಣೆ ತುಷಾರ ಜನಾಂಗ, ಪಾರಸಿಕರ ಜೀವನಶೈಲಿ, ಆಚರಣೆಗಳು, ಚೀನಾಗೋಡೆಯ ನಿರ್ಮಾಣ ಮೊದಲಾದವುಗಳೊಂದಿಗೆ ಥಳುಕು ಹಾಕಿಕೊಂಡು ಕುತೂಹಲ ಹುಟ್ಟಿಸುತ್ತ ಮುಂದೆ ಸಾಗುತ್ತದೆ.

ಇದು ಇತಿಹಾಸದ ಪುಟಗಳನ್ನೂ ತೆರೆಯುತ್ತದೆ. ನಾಡಿನ ಅಭಿವೃದ್ಧಿಯಲ್ಲಿ ಕಾಡಿನ ನಾಶ ಅಂದೇ ಆರಂಭವಾಗಿರುವುದನ್ನು ಕಾಣಬಹುದಾಗಿದೆ. ಗುಲಾಮಗಿರಿ, ಶೋಷಣೆ, ನಾಣ್ಯಗಳ ಚಲಾವಣೆ ಚಿನ್ನ, ಬೆಳ್ಳಿ, ಕಂಚು ಹಿತ್ತಾಳೆ ನಾಣ್ಯಗಳ ವಿನಿಮಯ, ಧಾರ್ಮಿಕ ಕೇಂದ್ರಗಳು ವ್ಯಾಪಾರದ ಕೇಂದ್ರವಾಗಬೇಕೆಂಬ ಚಿಂತನೆಗಳನ್ನು ಕಾಣುತ್ತೇವೆ. ಚೀನಿ ದುಕುಲ ಮತ್ತು ತಥಾಗತ, ಹವಿನೇಮ, ಶಿಖನೇಮ, ಸಗನೇಮಿ, ಜ್ಞಾನಸೇನ ಬಿಕ್ಕು, ಮಧುಮಾಯಾ ಭಾನಲೀಹ್ವಾಳ ಸೇಡು ಮೊದಲಾದ ಪಾತ್ರಗಳು ಕಾದಂಬರಿಯ ಓಟಕ್ಕೆ ಭಂಗ ತರದಂತೆ ನಡೆದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ ಎಂದರು.

ವೇದಿಕೆಯಲ್ಲಿ ಸಂಸ್ಥಾಪಕ ಅಧ್ಯಕ್ಷ ಬಿ.ಬಿ ಕೊಂಗಂಡಿ, ನೂತನ ಅಧ್ಯಕ್ಷ ಡಾ.ವಿ-ಜಯಕುಮಾರ ಕಾರ್ಚಿ ಮಾತನಾಡಿದರು. ಶಿಕ್ಷಕ ಅಪ್ಪಾಸಾಹೇಬ ಮೂಲಿಮನಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಶ್ರೀಕಾಂತ ಪತ್ತಾರ ನಿರ್ವಹಿಸಿದರು. ಉಪಾಧ್ಯಕ್ಷ ಆರ್.ಬಿ.ದಮ್ಮೂರಮಠ ವಂದಿಸಿದರು.ಐವತ್ತಕ್ಕು ಅಧಿಕ ಸಹೃದಯಿಗಳು ಉಪಸ್ಥಿತರಿದ್ದರು.

# ಪುರಸಭೆ ವ್ಯಾಪ್ತಿಯ ಸಿ.ಸಿ ರಸ್ತೆಗಳಲ್ಲಿ ವೇಗ ನಿಯಂತ್ರಕ ಅಳವಡಿಸಲು ಕ.ರ. ವೇ ಸ್ವಾಭಿಮಾನಿ ಸೇನೆ ಅಗ್ರಹ



❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಡಿ.18 – ಪಟ್ಟಣದ ಬಡಾವಣೆಯಲ್ಲಿ ನಿರ್ಮಿಸ ಲಾಗುತ್ತಿರುವ ಸಿಸಿ ರಸ್ತೆಗಳ ಮೇಲೆ ಇತ್ತೀಚಿನ ದಿನಗಳಲ್ಲಿ ವಾಹನ ಸಂಚಾರವು ಅತಿ ಹೆಚ್ಚಾಗಿದ್ದು, ಕೆಲವು ವಾಹನ ಚಾಲಕರು ಅತಿವೇಗದಲ್ಲಿ ಸಂಚರಿಸುತ್ತಿದ್ದಾರೆ.**

ಇದರಿಂದ ಪಾದಚಾರಿಗಳು, ಶಾಲಾ ಮಕ್ಕಳು, ವೃದ್ಧರು ಹಾಗೂ ಮಹಿಳೆಯರಿಗೆ ರಸ್ತೆ ದಾಟುವ ಸಂದರ್ಭದಲ್ಲಿ ಅಪಾಯ ಎದುರಾಗುತ್ತಿದ್ದು ಕೂಡಲೇ ಸಿ ಸಿ ರಸ್ತೆಗಳಲ್ಲಿ ರಬ್ಬರ್ ಹಂಪ್ಸ್ ಅಳವಡಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ (ರೀ) ತಾಲೂಕ ಅಧ್ಯಕ್ಷ ಜಿಲಾನಿ ಪಾಷಾ ಪುರಸಭೆಯ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಿ ನಂತರ ಮಾತನಾಡಿದ ಅವರು ಪಟ್ಟಣದ ವಿವಿಧ ವಾರ್ಡುಗಳಲ್ಲಿ ವಿಶೇಷವಾಗಿ ಶಾಲೆ, ಅಂಗನವಾಡಿ, ದೇವಸ್ಥಾನ, ಆಸ್ಪತ್ರೆ, ಬಸ್ ನಿಲ್ದಾಣ ಹಾಗೂ ವಸತಿ ಪ್ರದೇಶಗಳ ಬಳಿ ಯಾವುದೇ ವೇಗ ನಿಯಂತ್ರಣ ವ್ಯವಸ್ಥೆ ಇಲ್ಲದ ಕಾರಣ ಅಪಘಾತಗಳು ಸಂಭವಿಸುವ ಆತಂಕ ಹೆಚ್ಚಾಗಿದೆ.

ಈ ಹಿನ್ನೆಲೆ ಸಾರ್ವಜನಿಕರ ಸುರಕ್ಷತೆಗಾಗಿ ಸಿಸಿ ರಸ್ತೆ ಗಳಲ್ಲಿ ಸೂಕ್ತ ಅಂತರದಲ್ಲಿ ರಬ್ಬರ್ ಹಂಪ್ಸ್ (ವೇಗ ನಿಯಂತ್ರಕಗಳು) ಅಳ ವಡಿಸುವುದು ಅತ್ಯಂತ ಅಗತ್ಯವಾಗಿದೆ. ಪುರಸಭೆ ವ್ಯಾಪ್ತಿಯಲ್ಲಿ ನಿರ್ಮಿಸಲಾಗುತ್ತಿರುವ ಸಿಸಿ ರಸ್ತೆಗಳಲ್ಲಿ ರಬ್ಬರ್ ಹಂಪ್ಸ್ ಗಳನ್ನು ಅಳವಡಿಸಿ ಅಪಘಾತಗಳನ್ನು ತಡೆಯಬೇಕೆಂದು ಒತ್ತಾಯಿಸಿದ ಅವರು ಒಂದು ವೇಳೆ ನಮ್ಮ ಮನವಿಗೆ ಸ್ಪಂದಿಸದಿದ್ದರೆ ಮುಂಬರುವ ದಿನಗಳಲ್ಲಿ ಪುರಸಭೆ ಕಾರ್ಯಾಲಯದ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮನವಿ ಮೂಲಕ ಎಚ್ಚರಿಸಿದರು. ಈ ಸಂದರ್ಭದಲ್ಲಿ ರವಿಕುಮಾರ್ ಬರಗುಡಿ, ಅಲ್ಲಾವುದ್ದೀನ್ ಬಾಬಾ, ಮೋಷಿನ್ ಖಾನ್, ಮರಿಯಪ್ಪ ಹಟ್ಟಿ, ಅಜೀಜ್ ಪಾಷಾ, ಶಬ್ಬಿರ್ ಆಟೋ, ವೀರೇಶ್ ಐದನಾಳ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಜಿಲ್ಲಾ ಪ್ರಾಣಿದಯಾ ಸಂಘದ ಸಭೆ ಬೀದಿ ನಾಯಿಗಳ ಹಾವಳಿ ತಪ್ಪಿಸಲು ಅಗತ್ಯ ಕ್ರಮಕೈಗೊಳ್ಳಿ: ಜಿಲ್ಲಾಧಿಕಾರಿ ನಿತೀಶ್ ಕೆ.

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 17 (ಕರ್ನಾಟಕ ವಾರ್ತೆ): ಜಿಲ್ಲೆಯಲ್ಲಿ ಬೀದಿ ನಾಯಿಗಳ ಹಾವಳಿ ತಪ್ಪಿಸಲು ನಗರ ಸ್ಥಳೀಯ ಸಂಸ್ಥೆಗಳು ಅಗತ್ಯ ಕ್ರಮಕೈಗೊಳ್ಳಬೇಕು. ಸಾರ್ವಜನಿಕರಿಗೂ ಜಾಗೃತಿ ಮೂಡಿಸುವ ಕೆಲಸ ಮಾಡಬೇಕೆಂದು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಡಿಸೆಂಬರ್ 17ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಜಿಲ್ಲಾ ಪ್ರಾಣಿದಯಾ ಸಂಘದ ವತಿಯಿಂದ ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ, ರೇಬಿಸ್ ಲಸಿಕೆ ತಿಳುವಳಿಕೆ ಮೂಡಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಬೇಕು. ಅಲ್ಲದೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶದಲ್ಲಿನ ಅಂಶಗಳನ್ನು ಕೂಡಲೇ ಕ್ರಿಯಾಶೀಲರಾಗಿ ಸೂಕ್ತ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.



ಸರ್ಕಾರಿ ಹಾಗೂ ಖಾಸಗಿ ಶೈಕ್ಷಣಿಕ ಸಂಸ್ಥೆಗಳು, ಜಿಲ್ಲಾ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯಕೀಯ ಕಾಲೇಜುಗಳು ಸೇರಿದಂತೆ ಸಾರ್ವಜನಿಕ ಕ್ರೀಡಾಂಗಣಗಳು ಅಥವಾ ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ಬಸ್ ಡಿಪೋಗಳು, ರೈಲು ನಿಲ್ದಾಣಗಳು ಇತ್ಯಾದಿ ಸಾರ್ವಜನಿಕ ಪ್ರದೇಶಗಳಲ್ಲಿ ಇರುವ ಎಲ್ಲಾ ಬೀದಿ ನಾಯಿಗಳನ್ನು ಸಂಬಂಧ ಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಸೆರೆಹಿಡಿದು ಅವುಗಳ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಕ್ರಮ ಕೈಗೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆದಷ್ಟು ಬೇಗನೆ ಕಾರ್ಯಾಚರಣೆಯನ್ನು ಆರಂಭಿಸಬೇಕೆಂದು.

ನಾಯಿ ಹಿಡಿಯುವ ತಂಡವು ಸಂಬಂಧಪಟ್ಟ ಸಾರ್ವಜನಿಕ ಸಂಸ್ಥೆಗಳಿಗೆ ಭೇಟಿ ನೀಡುವ ದಿನಾಂಕ ಮತ್ತು ಸಮಯವನ್ನು ಮುಂಚಿತವಾಗಿ ತಿಳಿಸಬೇಕು. ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ಹಿಡಿದ ನಂತರ ಅವುಗಳಿಗೆ ಆಶ್ರಯ ನೀಡಲು ನಿಗದಿತ ಕಟ್ಟಡ ಸ್ಥಳಗಳಿಗೆ ಸ್ಥಳಾಂತರಿಸಬೇಕು. ಅಲ್ಲದೆ ರೇಬೀಸ್ ಪೀಡಿತ ನಾಯಿಗಳನ್ನು ಪ್ರತ್ಯೇಕ ಕಟ್ಟಡ ನಿರ್ವಹಣೆ ಮಾಡಬೇಕು. ಬೀದಿ ನಾಯಿಗಳನ್ನು ಸಂತಾನಹರಣ ಶಸ್ತ್ರಚಿಕಿತ್ಸೆಗೊಳಿಸುವ ಕುರಿತು. ಪ್ರಾಣಿ ಕಲ್ಯಾಣ ಮಂಡಳಿಯಿಂದ ಮಾನ್ಯತೆ ಪಡೆದ ಎನ್.ಜಿ.ಓ.ಗಳಲ್ಲದೇ ಹೆಚ್ಚಿನ ಮಂಡಳಿಯಿಂದ ಪ್ರಸ್ತಾವನೆ ಪಡೆದು ನಿಯಮಾನುಸಾರ ಕ್ರಮವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಪಶುಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆಯ ಉಪ ನಿರ್ದೇಶಕರಾದ ಪೋಮ್‌ಸಿಂಗ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಚಂದ್ರಶೇಖರ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮ, ರಾಯಚೂರು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ತಿಮ್ಮಪ್ಪ, ಯುವ ಸಬಲೀಕರಣ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿರೇಶ ನಾಯಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಸೇರಿದಂತೆ ವಿಸಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಜಿಲ್ಲೆಯ ವಿವಿಧ ತಾಲೂಕಿನ ತಹಶೀಲ್ದಾರರು ಇದ್ದರು.

# ಮಾನವಿಯ ವಿವಿಧ ಹೋಟೆಲ್ ಮತ್ತು ಬಾರ್ & ರೆಸ್ಟೋರೆಂಟ್‌ಗಳ ಮೇಲೆ ಹಠಾತ್ ದಾಳಿ ಶುದ್ಧತೆ, ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡಿ: ಎಸಿ ಗಜಾನನ ಬಾಳೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 17 (ಕರ್ನಾಟಕ ವಾರ್ತೆ): ಉಪ ವಿಭಾಗದ ಎಲ್ಲಾ ವ್ಯಾಪಾರಿಗಳು ಹಾಗೂ ಹೋಟೆಲ್, ಅಂಗಡಿ ಸೇರಿದಂತೆ ಇತರೆ ಆಹಾರ ಕೇಂದ್ರಗಳು ತಪ್ಪದೇ ತಮ್ಮ ಆವರಣದಲ್ಲಿ ಶುದ್ಧತೆ, ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡಬೇಕೆಂದು ರಾಯಚೂರು ಕಂದಾಯ ಉಪ ವಿಭಾಗದ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಸೂಚಿಸಿದರು.**

ಇತ್ತೀಚೆಗೆ ಜಿಲ್ಲೆಯ ಮಾನವಿ ಪಟ್ಟಣದಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ತಹಶೀಲ್ದಾರ್ ಕಾರ್ಯಾಲಯ, ಪುರಸಭೆ, ತಾಲೂಕ ಆರೋಗ್ಯ ಇಲಾಖೆ, ಆಹಾರ ಸುರಕ್ಷತಾ ಇಲಾಖೆ, ಕಂದಾಯ ಇಲಾಖೆ, ಪುರಸಭೆ ಹಾಗೂ ಪೋಲಿಸ್ ಇಲಾಖೆಯೊಂದಿಗೆ ವಿವಿಧ ಹೋಟೆಲ್ ಮತ್ತು ಬಾರ್ & ರೆಸ್ಟೋರೆಂಟ್‌ಗಳ ಮೇಲೆ ಹಠಾತ್ ದಾಳಿ ಮಾಡಿ ಗುಣಮಟ್ಟವನ್ನು ಪರಿಶೀಲಿಸಿ, ಅವರು ಮಾತನಾಡಿದರು. ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ,2006ರ ಹಾಗೂ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಮಗಳು 2011ರ ಸೂಚನೆಗಳನ್ನು ಒಂದು ವಾರದೊಳಗಾಗಿ ಅನುಸರಿಸಬೇಕು. ಆಹಾರ ವ್ಯಾಪಾರ ನಿರ್ವಾಹಕರು ಸುಧಾರಣಾ ಸೂಚನೆಯನ್ನು ಅನುಸರಿಸಲು ವಿಫಲವಾದರೆ ಅವರ ಪರವಾನಿಗೆಯನ್ನು ಅಮಾನತುಗೊಳಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದರು.




ರಾಯಚೂರು ಕಂದಾಯ ಉಪ ವಿಭಾಗದ ವ್ಯಾಪ್ತಿಯ ಹೋಟೇಲ್‌ಗಳಲ್ಲಿ ಗುಣಮಟ್ಟವಾಗಿ ಆಹಾರ ಸುಧಾರಣೆ ಮಾಡಲು ಈಗಾಗಲೇ ಆಹಾರ ಸುರಕ್ಷತಾ ಅಧಿಕಾರಿಗಳಿಂದ ನೋಟಿಸ್ ನೀಡಲಾಗಿದೆ. ಮಾನವಿಯ ನಿಸರ್ಗ ಹೋಟೆಲ್, ಸಾಧಿಕ್ ಹೋಟೆಲ್, ಲಕ್ಷ್ಮೀವಿಲಾಸ ಹೋಟೆಲ್, ಗಗನ್ ಬಾರ್ & ರೆಸ್ಟೋರೆಂಟ್, ಜನತಾ ಹೋಟೆಲ್, ಡಾನ್ ಡಾಬಾಗಳ ಮೇಲೆ ದಾಳಿ ಮಾಡಿದರು. ಡಾನ್ ಡಾಬಾವನ್ನು ಸುಧಾರಣೆ ಮಾಡಲು ಅಪರ ಜಿಲ್ಲಾಧಿಕಾರಿಗಳು ಈ ಹಿಂದೆ ದಂಡ ವಿಧಿಸಿದರು ಸಹ ಯಾವುದೇ ಸುಧಾರಣೆಯಾಗದೇ ಇರುವುದು ಕಂಡು ಬಂದಿರುತ್ತದೆ. ಮತ್ತು ಮದ್ಯವನ್ನು ಡಾಬಾದಲ್ಲಿ ಸೇವನೆ ಮಾಡುತ್ತಿರುವುದು ದಾಳಿ ವೇಳೆಯಲ್ಲಿ ಕಂಡುಬಂದಿದೆ ಎಂದರು. ವಿ.ಎ.ಬಾರ್ & ರೆಸ್ಟೋರೆಂಟ್‌ನಲ್ಲಿ ನೀರಿನ ಗಿಜರ್ ಸ್ಥಳದಲ್ಲಿ ಕಲ್ಲಿದ್ದಲು ಮತ್ತು ಸಿಲೆಂಡರ್‌ಗಳನ್ನು ಸಂಗ್ರಹ ಮಾಡಲಾಗುತ್ತಿದೆ.

ಹಾಗೂ ಅಡುಗೆ ಕೋಣೆಯಿಂದ ಬರುವಂತಹ ಹೊಗೆಯನ್ನು 02 ಎಕ್ಸ್‌ಸ್ಟ ಫ್ಯಾನ್‌ಗಳ ಮುಖಾಂತರ ಈ ಕೋಣೆಯಲ್ಲಿಯೇ ಬಿಟ್ಟಿರುತ್ತಾರೆ. ಇದರಿಂದ ಕೋಣೆಯ ತಾಪಮಾನ ಏರುಪೇರಿನಲ್ಲಿ ಅಗ್ನಿ ಅವಗಡ ಸಂಭವಿಸುವ ಸಂಭವವಿದ್ದು, ಈ ಹೋಟೇಲ್ ಮಾಲೀಕರಿಂದ ಯಾವುದೇ ಬೆಂಕಿ ನಿಂದಿಸುವ ಸಲಕರಣೆಗಳು ಇರಿಸದೇ ಇರುವುದು ಕಂಡು ಬಂದಿದೆ ಎಂದರು. ಈ ಹೋಟಲ್‌ಗಳಿಗೆ ನಿಯಮಾನುಸಾರ ಕಾಯ್ದೆ ಪ್ರಕಾರ ಗೃಹ ಬಳಕೆ ಸಿಲಿಂಡರ್‌ಗಳ ಕುರಿತು ಉಪ ನಿರ್ದೇಶಕರು ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರಾಯಚೂರು ಇವರು ಕಾನೂನು ಕ್ರಮಕೈಗೊಳ್ಳುತ್ತಾರೆ. ಎಲ್ಲಾ ಹೋಟೆಲ್‌ಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದರಿಂದ ಪುರಸಭೆ ಮಾನ್ವಿ ಇವರಿಂದ ದಂಡ ಹಾಗೂ ಈ ಸಾಮಗ್ರಿಗಳನ್ನು ಮುಟ್ಟುಗೋಲು ಮಾಡಿಕೊಳ್ಳಲಾಗಿದೆ ಎಂದರು.

ಆಹಾರ ಸುರಕ್ಷತಾ ಅಧಿಕಾರಿಗಳು ಮಾನವಿ ಇವರು ಸಾಧಿಕ್ ಹೋಟೆಲ್ ಮತ್ತು ಡಾನ್ ಡಾಬಾ ಇವರ ಆಹಾರ ಪರವಾನಿಗೆ ಪ್ರಮಾಣ ಪತ್ರ ಅಥವಾ ಅರ್ಜಿಯನ್ನು ಅಮಾನತ್ತುಗೊಳಿಸಲು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾದೆ. ವಿ.ಎ.ಬಾರ್ & ರೆಸ್ಟೋರೆಂಟ್ ಇವರು ಅವಶ್ಯಕತೆ ಇರುವ ಸ್ಥಳದಲ್ಲಿ ಬೆಂಕಿ ನಿಂದಿಸುವ ಸಲಕರಣೆಗಳನ್ನು ಇರದೇ ಇರುವುದರಿಂದ ಮುಂದಿನ ಸೂಕ್ತ ಕ್ರಮಕ್ಕಾಗಿ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿಗಳು ಕರ್ನಾಟಕ ರಾಜ್ಯ ಅಗ್ನಿ ಶಾಮಕ ದಳ ಮತ್ತು ತುರ್ತು ಸೇವೆಗಳು ರಾಯಚೂರು ಇವರಿಗೆ ಸೂಚಿಸಲಾಗಿದೆ ಎಂದರು. ಎಲ್ಲಾ ಹೋಟೆಲ್, ಬಾರ್ & ರೆಸ್ಟೋರೆಂಟ್ ಮತ್ತು ಇತರೆ ಆಹಾರ ತಯಾರಿಸುವ ಮಾರಾಟ ಮಾಡುವವರು ತಪ್ಪದೇ ಆಹಾರ ಸುರಕ್ಷತ ನಿಯಮಗಳನ್ನು ಪಾಲಿಸಿ ಅಗತ್ಯ ಗುಣಮಟ್ಟ ಆಹಾರವನ್ನು ಸಾರ್ವಜನಿಕರಿಗೆ ನೀಡತಕ್ಕದ್ದು, ಹಾಗೂ ಎಲ್ಲಾ ವ್ಯಾಪಾರಸ್ಥರು, ಹೋಟೇಲ್‌ದಾರರು ತಪ್ಪದೇ ನಿಯಮಾನುಸಾರ ಸಂಬಂಧಿಸಿದ ಇಲಾಖೆಗಳಿಂದ ವಾಣಿಜ್ಯ ಪರವಾನಿಗೆ ಮತ್ತು ಆಹಾರ ಸುರಕ್ಷತ ಪರವಾನಿಗೆಯನ್ನು ಅಥವಾ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹ್ಮದ್, ತಹಶೀಲ್ದಾರ್ ವಾಯೀದ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್, ತಾಲೂಕ ಆರೋಗ್ಯಾಧಿಕಾರಿ ಡಾ.ಶರಣಬಸವ, ಆಹಾರ ಸುರಕ್ಷತಾ ಇಲಾಖೆಯ ಅಧಿಕಾರಿ ಬನದೇಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.